ಸಂಪುಟ: 01 ಸಂಚಿಕೆ: 01 ಪುಟ: 04 ಬೆಲೆ: 02 ಗುರುವಾರ ಜೂನ್ 04 2026 ಮೊ: 7411137969/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಸತ್ಯದ ಧ್ವನಿ... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಜನರ ನುಡಿ....
ಕನ್ನಡ ದಿನ ಪತ್ರಿಕೆ

Volume:01 Issue:01 Pages:04 Price:02 THURSDAY JUNE 04 2026 RNI NO: KNKAN/26/A4008 E-mail:ajathashathru2026@gmail.com




## ನೂತನ ಸಿಎಂ ವಿಶೇಷ ಯೋಜನೆಗಳು ಘೋಷಣೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಡಿಕೆ ಶಿವಕುಮಾರ್ ಅವರು ಬುಧವಾರ ರಾಜ್ಯದ 18ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ರಾಜ್ಯದ ವಿದ್ಯಾರ್ಥಿಗಳಿಗೆ ಸಿಹಿ ಸುದ್ದಿ ನೀಡಿದ್ದು, ಎಲ್ಲಾ ಶಾಲಾ, ಕಾಲೇಜ್ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವುದಾಗಿ ಘೋಷಣೆ ಮಾಡಿದ್ದಾರೆ.**




ಇಂದು ಸಂಜೆ ವಿಧಾನಸೌಧದಲ್ಲಿ ನಡೆದ ತಮ್ಮ ನೇತೃತ್ವದ ಮೊದಲ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಡಿಕೆ ಶಿವಕುಮಾರ್ ಅವರು, ರಾಜ್ಯದಲ್ಲಿ ಹೊಸ ಯುಗ ಆರಂಭಿಸಲು, ನಾವು ಮೊದಲ ಸಚಿವ ಸಂಪುಟ ಸಭೆಯಲ್ಲಿ ಕೆಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ ಎಂದರು. ರಾಜ್ಯದಲ್ಲಿ ಇನ್ಮುಂದೆ ವಿದ್ಯಾರ್ಥಿನಿಯರಂತೆ ಎಲ್ಲಾ ಶಾಲಾ, ಕಾಲೇಜ್ ವಿದ್ಯಾರ್ಥಿಗಳಿಗೂ ಕೂಡ ಉಚಿತ ಬಸ್ ಪಾಸ್ ನೀಡಲಾಗುವುದು. ಶೈಕ್ಷಣಿಕ ವರ್ಷ ಆರಂಭವಾಗಿದ್ದು, ಶೀಘ್ರದಲ್ಲೇ ಉಚಿತ ಬಸ್ ಪಾಸ್ ವಿತರಿಸಲು ಅರ್ಜಿ ಕರೆಯಲಾಗುವುದು ಎಂದರು. ಭಾರತ್ ಜೋಡೋ ಯುವ ಸಂಘಕ್ಕೆ 10 ಲಕ್ಷ : ಯುವಕರಲ್ಲಿ ನಾಯಕತ್ವ ಗುಣ ಬೆಳೆಸುವ ಉದ್ದೇಶದಿಂದ ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ 'ಭಾರತ್ ಜೋಡೋ ಯುವಕ ಸಂಘ' ರಚನೆ ಮಾಡುವ ಚಿಂತನೆ ಇದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು. ರಾಜ್ಯಾದ್ಯಂತ ಒಟ್ಟು 10 ಸಾವಿರ ಯುವಕರ ಸಂಘಗಳನ್ನು ರಚಿಸಲು ಉದ್ದೇಶಿಸಲಾಗಿದ್ದು, ಪ್ರತಿ ಸಂಘಕ್ಕೆ ಸರ್ಕಾರದಿಂದ 10 ಲಕ್ಷ ರೂ ಅನುದಾನ ನೀಡಲಾಗುವುದು ಎಂದು ತಿಳಿಸಿದರು. ಬಿ ಖಾತಾಯಿಂದ ಎ ಖಾತೆ ಯೋಜನೆ ರಾಜ್ಯಕ್ಕೆ ವಿಸ್ತರಣೆ: ಬೆಂಗಳೂ-ರಿಗಷ್ಟೇ ಸೀಮಿತವಾಗಿದ್ದ ಬಿ ಖಾತಾಯಿಂದ ಎ ಖಾತೆ ಯೋಜನೆಯನ್ನು ರಾಜ್ಯಾದ್ಯಂತ ವಿಸ್ತರಣೆ ಮಾಡಲಾಗುವುದು.

# ಡಿಕೆಶಿ ಯುಗ ಆರಂಭ

## ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಸಂವಿಧಾನದ ಪುಸ್ತಕವನ್ನು ಹಿಡಿದು, ಗಂಗಾಧರಜ್ಜನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಆರಂಭದಲ್ಲಿ ವೇದಿಕೆಯಲ್ಲಿ ಎಲ್ಲಾ ಗಣ್ಯರಿಗೂ ಗುಚ್ಚ ನೀಡಿ ಆಹ್ವಾನಿಸಿದ ಡಿ.ಕೆ.ಶಿವಕುಮಾರ್, ಪ್ರಮಾಣ ವಚನ ಸ್ವೀಕಾರಕ್ಕೂ ಮುನ್ನಾ ವೇದಿಕೆಯಲ್ಲಿ ಇರಿಸಿದ್ದ ಅಜ್ಜಯ್ಯನ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.**







ರಾಜ್ಯಪಾಲರು ಅಧಿಕಾರ ಮತ್ತು ಗೌಪ್ಯತೆಯ ವಚನ ಬೋಧಿಸಿದರು. ಪ್ರಮಾಣ ವಚನ ಸ್ವೀಕ-ರಿಸಿದ ಬಳಿಕ ದಾಖಲೆಯ ದಸ್ತಾವೇಜುಗಳಿಗೆ ಸಹಿ ಮಾಡಿದ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ರಾಜ್ಯಪಾಲರು ನೂತನ ಮುಖ್ಯಮಂತ್ರಿಯವರಿಗೆ ಹೂಗುಚ್ಛನೀಡಿ ಅಭಿನಂದಿಸಿದರು. ಡಾ.ಜಿ.ಪರಮೇಶ್ವರ್ ಉಪಮುಖ್ಯಮಂತ್ರಿಯಾಗಿ ಡಾ.ಬಿ.ಆರ್.ಅಂಬೇಡ್ಕರ್ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಪ್ರತಿಜ್ಞಾವಿಧಿ ಸ್ವೀಕರಿಸುವಾಗ ತಪ್ಪಾಗಿ ಓದಿದ್ದೀರಾ ಎಂದು ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದರು.

ಕಡತಗಳಿಗೆ ಸಹಿ ಹಾಕುವಾಗಲೂ ಅಧಿಕಾ-ರಿಗಳು ಲೋಪವನ್ನು ಪರಮೇಶ್ವರ್ ಅವರ ಗಮನಕ್ಕೆ ತಂದರು. ಸಂಪುಟ ದರ್ಜೆಯ ಸಚಿವರಾಗಿ ಕೆ.ಹೆಚ್.ಮುನಿಯಪ್ಪ ದೇವರ ಹೆಸರಿನಲ್ಲಿ, ಕೆ.ಜೆ.ಜಾರ್ಜ್ ದೇವರ ಹೆಸ-ರಿನಲ್ಲಿ, ಎಂ.ಬಿ.ಪಾಟೀಲ್ ವಿಶ್ವ ಗುರು ಅಣ್ಣ ಬಸವಣ್ಣ, ಬಸವಾದಿ ಶರಣರ ಹಾಗೂ ಸಿದ್ದೇಶ್ವರ ಮಹಾ ಸ್ವಾಮೀಜಿ ಅವರ ಹೆಸರಿನಲ್ಲಿ, ರಾಮಲಿಂಗಾರೆಡ್ಡಿ ಶ್ರದ್ಧಾ ಪೂರ್ವಕವಾಗಿ ದೇವರ ಹೆಸರಿನಲ್ಲಿ, ಸತೀಶ್ ಜಾರಕಿಹೊಳಿ ಶ್ರದ್ಧಾ ಪೂರ್ವಕವಾಗಿ ದೇವರ ಹೆಸರಿನಲ್ಲಿ, ಕೃಷ್ಣ ಬೈರೇಗೌಡ ಶ್ರದ್ಧಾಪೂರ್ವಕವಾಗಿ, ಪ್ರಿಯಾಂಕ ಖರ್ಗೆ ಶ್ರದ್ಧಾಪೂರ್ವಕವಾಗಿ, ಯು.ಟಿ.ಖಾದರ್ ಅವರ ದೇವರ ಹೆಸರಿನಲ್ಲಿ, ಈಶ್ವರ್ ಖಂಡ್ರೆ ಅವರು ದೇವರ ಹಾಗೂ ಚನ್ನಬಸವ ಪಟ್ಟದೇವರ ಹೆಸ-ರಿನಲ್ಲಿ, ಯತೀಂದ್ರ ಸಿದ್ದರಾಮಯ್ಯ , ಬೈರತಿ ಸುರೇಶ್, ಶರಣ ಪ್ರಕಾಶ್ ಪಾಟೀಲ್ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಆರಂಭದಲ್ಲಿ ವೇದಿಕೆಗೆ ಅಗಮಿಸಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೂತನ ಸಚಿವರ ಕೈ ಕುಲಕಿ ಶುಭ ಹಾರೈಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆತ್ಮೀಯವಾಗಿ ಬರ ಮಾಡಿಕೊಂಡರು.ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಡಿ.ಕೆ.ಶಿವಕುಮಾರ್ ಮತ್ತೊಮ್ಮೆ ಅಪ್ಪಿಕೊಂಡು ಧನ್ಯವಾದ ಹೇಳಿದರು.ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ವೇದಿಕೆಯಲ್ಲಿದ್ದರು.


ಡಿ.ಕೆ.ಶಿವಕುಮಾರ್‌ರವರು ವೀರ ಗಂಗಾಧರಜ್ಜ ಅವರ ಹೆಸರನಲ್ಲಿ ಪ್ರಮಾಣವಚನ ಸ್ವೀಕ-ರಿಸಿದರು. ಕೈಯಲ್ಲಿ ಸಂವಿಧಾನ ಪುಸ್ತಕ ಹಿಡಿದುಕೊಂಡಿದ್ದ ಅವರು ಶ್ವೇತವರ್ಣದ ವಸ್ತ್ರ ಧರಿಸಿದ್ದರು.ಸಾಮಾನ್ಯವಾಗಿ ಈವರೆಗೂ ಲೋಕಭವನದ ಗಾಜಿನ ಮನೆಯಲ್ಲಿ ಅಧಿಕಾರ ಸ್ವೀಕಾರ ಸಮಾರಂಭವು ಪೂರ್ವಾಭಿಮುಖವಾಗಿ ನಡೆಯುತ್ತಿತ್ತು. ಜ್ಯೋತಿಷಿಗಳ ಸಲಹೆ ಮೇರೆಗೆ ಇದೇ ಮೊದಲ ಬಾರಿಗೆ ಡಿ ಕೆ ಶಿವಕುಮಾರ್ ಅವರು ಪಶ್ಚಿಮಾಭಿಮುಖವಾಗಿ ಅಧಿಕಾರ ಸ್ವೀಕರಿಸಿದ್ದು ವಿಶೇಷ. ರಾಜ್ಯದ ಅತ್ಯಂತ ಪ್ರಭಾವ ಒಕ್ಕಲಿಗ ಸಮುದಾಯದ ಎಂಟನೇ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಡಿಕೆಶಿ ಪಾತ್ರರಾಗಿದ್ದಾರೆ.ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಾ.ಜಿ.ಪರಮೇಶ್ವರ ಅವರು ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದು ವಿಶೇಷವಾಗಿತ್ತು.

ತಮ ಸಂಪುಟಕ್ಕೆ ಶಿವಕುಮಾರ್ ಪ್ರಾದೇಶಿಕತೆ, ಹಿರಿತನ, ಪಕ್ಷಕ್ಕೆ ಸಲ್ಲಿಸಿರುವ ಸೇವೆ, ಮುಂದಿನ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು 13 ಮಂದಿ ಶಾಸಕರಿಗೆ ಸಚಿವ ಸ್ಥಾನ ಕಲ್ಪಿಸಿದ್ದಾರೆ.ಸಂಪುಟದಲ್ಲಿ ಮೂವರು ಒಕ್ಕಲಿಗರು, ಮೂವರು ಪರಿಶಿಷ್ಟ ಜಾತಿ, ಮೂವರು ಲಿಂಗಾಯತರು, ಇಬ್ಬರು ಹಿಂದುಳಿದ ಸಮುದಾಯದಿಂದ, ಒಬ್ಬರು ಪರಿಶಿಷ್ಟ ಪಂಗಡದಿಂದ, ಕ್ರಿಶ್ಚಿಯನ್, ಮುಸ್ಲಿಂ ಸಮುದಾಯದಿಂದ ತಲಾ ಒಬ್ಬರು ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ.

## ಯತೀಂದ್ರಗೆ ಸಚಿವ ಸಂಪುಟದಲ್ಲಿ ಸ್ಥಾನ

ಅ.ಶ. ಸುದ್ದಿ ಮಂಡ್ಯ

**ಮಂಡ್ಯ: ನಿಯೋಜಿತ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ನೇತೃತ್ವದಲ್ಲಿ ಹೊಸ ಸಚಿವ ಸಂಪುಟ ರಚನೆಯಾಗಲಿದ್ದು, ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹೆಸರನ್ನು ಕಾಂಗ್ರೆಸ್ ಹೈಕಮಾಂಡ್ ಅನುಮೋದಿಸಿದೆ. ಸಚಿವರ ಅಧಿಕೃತ ಪಟ್ಟಿ ಇನ್ನೂ ಬಿಡುಗಡೆಯಾಗದಿದ್ದರೂ, ಮೊದಲ ಹಂತದಲ್ಲಿ ಯತೀಂದ್ರ ಅವರನ್ನು ಸಂಪುಟಕ್ಕೆ ಸೇ-ರಿಸಿಕೊಳ್ಳುವ ಮೂಲಕ ಮೈಸೂರು ಜಿಲ್ಲೆ ಸಂಪುಟದಲ್ಲಿ ಮಹತ್ವದ ಸ್ಥಾನ ಉಳಿಸಿಕೊಳ್ಳಲಿದೆ ಎಂದು ಬಲ್ಲ ಮೂಲಗಳು ದೃಢಪಡಿಸಿವೆ.**



ತಂದೆ ಸಿದ್ದರಾಮಯ್ಯ ಅವರು ಸಿಎಂ ಆಗಿ ನಿರ್ಗಮಿಸಿದ ನಂತರ ಯತೀಂದ್ರ ಅವರು ಸರ್ಕಾರದಲ್ಲಿ ಮೈಸೂ-ರಿನ ಪ್ರಮುಖ ರಾಜಕೀಯ ಮುಖವಾಗಲು ಸಜ್ಜಾಗಿರುವುದರಿಂದ ಈ ಸೇರ್ಪಡೆ ಮಹತ್ವ ಪಡೆದುಕೊಂಡಿದೆ. ರೋಗಶಾಸ್ತ್ರಜ್ಞರಾಗಿರುವ ಯತೀಂದ್ರ ಅವರು ಎಂಬಿಬಿಎಸ್ ಪೂರ್ಣಗೊಳಿಸಿ ನಂತರ ಎಂಡಿ ಪದವಿ ಪಡೆದು ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದರು. 2018 ಮತ್ತು 2023 ರ ನಡುವೆ ವರುಣ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದರು ಮತ್ತು ನಂತರ ಪರಿಷತ್ತಿಗೆ ಆಯ್ಕೆಯಾದರು. ತಮ್ಮ ತಂದೆಯ ವರುಣ ಕ್ಷೇತ್ರದ ಉಸ್ತುವಾರಿ ವಹಿಸಿಕೊಂಡರು. ಸಂಘಟನಾತ್ಮಕ ವ್ಯವಹಾರಗಳಲ್ಲಿ ಸಕ್ರಿಯವಾಗಿರುವ ಯತೀಂದ್ರ ಸರಳ ಸಜ್ಜನಿಕಗೆ ಹೆಸರುವಾಸಿಯಾಗಿದ್ದಾರೆ. ಹೀಗಾಗಿ ಅವರಿಗೆ ಒಂದು ಪ್ರಮುಖ ಖಾತೆಯನ್ನು ವಹಿಸುವ ನಿರೀಕ್ಷೆಯಿದೆ. ಯತೀಂದ್ರ ಅವರು ಸಂಪುಟಕ್ಕೆ ಬಡ್ತಿ ಪಡೆಯುವುದರಿಂದ ಸರ್ಕಾರದಲ್ಲಿ ಸಿದ್ದರಾಮಯ್ಯ ಅವರ ಪ್ರಭಾವ ಮುಂದುವರಿಯುವುದು ಮಾತ್ರವಲ್ಲದೆ, ಯುವ ಪೀಳಿಗೆಯ ನಾಯಕರನ್ನು ಉತ್ತೇಜಿಸುವ ಮತ್ತು ಮೈಸೂರು ಪ್ರದೇಶದ ಪ್ರಮುಖ ಧ್ವನಿ ಮತ್ತು ಪ್ರಾತಿನಿಧ್ಯವಾಗಬೇಕೆಂಬ ಕಾಂಗ್ರೆಸ್ ನಾಯಕತ್ವದ ಉದ್ದೇಶವೂ ಸ್ಪಷ್ಟವಾಗುತ್ತದೆ ಎಂದು ಮೈಸೂರಿನ ರಾಜಕೀಯ ನಾಯಕರು ನಂಬುತ್ತಾರೆ.

# ನರೇಗ ಯೋಜನೆ ; ವೇತನದಲ್ಲಿ ವಂಚನೆ ಆರೋಪ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ತಾಲೂಕಿನ ಹಣವಾಳ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ವಿಕಲಚೇತನ ಕೂಲಿಕಾರರಿಗೆ ನೀಡಬೇಕಾದ ವೇತನದಲ್ಲಿ ವಂಚನೆ ಮಾಡಲಾಗುತ್ತಿದೆ ಎಂದು ಆರೋಪಿಸಿ, ಭಾರತೀಯ ಪ್ರಜಾ ಸಂಘ (ಭೀಮ ನಡೆ) ರಾಜ್ಯ ಸಮಿತಿ ವತಿಯಿಂದ ಇಂದು ಹಣವಾಳ ಗ್ರಾಮ ಪಂಚಾಯತ್ ಕಚೇರಿಯ ಮುಂದೆ ಬೃಹತ್ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿತ್ತು.**

ಸರ್ಕಾರದ ಆದೇಶದಂತೆ ವಿಕಲಚೇತನ ಕೂಲಿಕಾರರಿಗೆ ದಿನವೊಂದಕ್ಕೆ 375 ರೂಪಾಯಿ ವೇತನ ನೀಡಬೇಕಾಗಿದೆ. ಆದ'ರೆ, ಹಣವಾಳ ಗ್ರಾಮ ಪಂಚಾಯತಿ ಅಧಿಕಾರಿಗಳು ನಿಯಮಗಳನ್ನು ಗಾಳಿಗೆ ತೂರಿ, ಮನಬಂದಂತೆ ಕಡಿಮೆ ವೇತನ ಪಾವತಿಸುವ ಮೂಲಕ ವಿಕಲಚೇತನರಿಗೆ ಹಾಗೂ ಕೂಲಿಕಾರರಿಗೆ ಅನ್ಯಾಯ ಮಾಡುತ್ತಿದ್ದಾರೆ. ಮಳೆ-ಬೆಳೆ ಇಲ್ಲದ ಸಂಕಷ್ಟದ ಸಮಯದಲ್ಲಿ ಕೂಲಿ ಕೆಲಸವನ್ನೇ ನಂಬಿ ಬದುಕುತ್ತಿರುವವರಿಗೆ ಈ ರೀತಿಯ ವಂಚನೆ ನಡೆಯುತ್ತಿರುವುದು ಖಂಡನೀಯ ಎಂದು ಸಂಘಟನೆಯ ಅಧ್ಯಕ್ಷರಾದ ದುರುಗಪ್ಪ ಪಿ ಹಣವಾಳ ಆಕ್ರೋಶ ವ್ಯಕ್ತಪಡಿಸಿದರು.



ವಿಕಲಚೇತನರಿಗೆ ಪ್ರತಿವರ್ಷ 125 ದಿನಗಳ ಕಡ್ಡಾಯ ಕೆಲಸ ನೀಡಬೇಕು. ಸರ್ಕಾರದ ಆದೇಶದಂತೆ ವಿಕಲಚೇತನರಿಗೆ ನಿಗದಿತ ಕೂಲಿ ಹಣವನ್ನು ತಕ್ಷಣ ಪಾವತಿಸಬೇಕು. ಕೂಲಿ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಪೆಂಡಲ್ ಹಾಗೂ ಪ್ರಥ'ಮ ಚಿಕಿತ್ಸಾ ವ್ಯವಸ್ಥೆಯನ್ನು ಕಲ್ಪಿಸಬೇಕು. ವಿಕಲಚೇತನರಿಗೆ ಪ್ರತ್ಯೇಕವಾದ ಜಾಬ್ ಕಾರ್ಡ್‌ಗಳನ್ನು ವಿತರಿಸಬೇಕು. ಕೆಲಸ ಸಿಗದ ಅವಧಿಗೆ ನಿರುದ್ಯೋಗ ಭತ್ಯೆಯನ್ನು ಪಾವತಿಸಬೇಕು ಎಂದರು. ಈ ಧರಣಿಯಲ್ಲಿ ಭಾರತೀಯ ಪ್ರಜಾ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ನೂರಾರು ವಿಕಲಚೇತನ ಫಲಾನುಭವಿಗಳು ಪಾಲ್ಗೊಂಡಿದ್ದರು.

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಬಂದು ಸಮಸ್ಯೆ ಪರಿಹರಿಸದಿದ್ದರೆ, ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚ-ರಿಸಿದ್ದಾರೆ. ಈ ಸಂದರ್ಭದಲ್ಲಿ ದೊಡ್ಡಬಸಪ್ಪ, ಈಶ್ವರಮ್ಮ, ಹುಸೇನಪ್ಪ, ಹುಲಿಗೆಮ್ಮ ಸೇರಿದಂತೆ ಸಂಘಟನೆ ಪದಾಧಿಕಾರಿಗಳು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಕಿರಣ ಕುಮಾರ ಅವರಿಗೆ ಮನವಿ ಪತ್ರ ಸಲ್ಲಿಸಿದರು.

## ಶಾಲಾ ಪ್ರಾರಂಭೋತ್ಸವ ಮತ್ತು ಶಿಕ್ಷಕರ-ಪಾಲಕ ಪೋಷಕರ ಮಹಾಸಭೆ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ತಾಲೂಕಿನ ಕನಕೊಪ್ಪ ಸರಕಾರಿ ಮಾಧ್ಯಮಿಕ ಹಿರಿಯ ಪ್ರಾಥ-'ಮಿಕ ಶಾಲೆಯಲ್ಲಿ 2026-27 ನೇ ಶೈಕ್ಷಣಿಕ ವರ್ಷವನ್ನು "ಉತ್ತಮ ಕಲಿಕೆ -ಉಜ್ವಲ ಭವಿಷ್ಯ" ಎಂಬ ಧ್ಯೇಯವಾಕ್ಯದೊಂದಿಗೆ ಸದರಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಪ್ರಾರಂಭಿಸಲಾಯಿತು.**

ಶಾಲಾ ಮಕ್ಕಳಿಗೆ ಗ್ರಾಮದ ಹಿರಿಯರು, ಸಹೃದಯಿ ಶಿಕ್ಷಣ ಪ್ರೇಮಿಗಳು, ಯುವಕರು, ತಾಯಂದಿರು ಪಾಲ್ಗೊಂಡು ಹೂಗುಚ್ಛ ನೀಡುವ ಮೂಲಕ ಪ್ರೀತಿಯಿಂದ ಸ್ವಾಗತಿಸಿ ಶುಭ ಹಾರೈಸಿದರು. ನಂತರ ವೇದಿಕೆ ಕಾರ್ಯಕ್ರಮವನ್ನು ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡು ಮಕ್ಕಳ ಗುಣಮಟ್ಟದ ಶಿಕ್ಷಣ-ಕ್ಕೆ ಪೂರಕವಾಗಿ ಶಾಲಾಭಿವೃದ್ಧಿ ಕುರಿತು ಚರ್ಚಿಸಲಾಯಿತು.



ಶಿಕ್ಷಣದ ಮಹತ್ವ, ಮಕ್ಕಳ ಹಾಜರಾತಿ ಕುರಿತು ಮುಖ್ಯೋಪಾಧ್ಯಾಯರು ಶರಣಪ್ಪ ತುಮರಿಕೊಪ್ಪ ಮಾತನಾಡಿದರು. ನಿಂಗಪ್ಪ ಗದ್ದಿ ಕಾರ್ಯಕ್ರಮ ಕುರಿತು ಮಾತನಾಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿ ಶರಣಪ್ಪ ಉಪ್ಪಾರ, ಶಿಕ್ಷಕಿ ರಾಜೇಶ್ವರಿ ಯವರು ಸರಕಾರಿ ಶಾಲೆಯ ಸೌಲಭ್ಯಗಳ ಕುರಿತು ಮಾತನಾಡಿ ಮಕ್ಕಳಿಗೆ, ಪಾಲಕ-ರಿಗೆ ಮನವರಿಕೆ ಮಾಡಿದರು.

ಮುಖ್ಯ ಅತಿಥಿಗಳಾಗಿ ಸುರೇಶ ಗದ್ದಿ, ಫಕೀರಪ್ಪ ಗುಡಿಹೊಲ, ಮಲ್ಲಪ್ಪ ಗುಡಿಹೊಲ, ರಾಜೇಸಾಬ ಬಾವಾಕಾನ, ನೀಲಪ್ಪ ಗದ್ದಿ, ಗಂಗಪ್ಪ ಗುರಿಕಾರ ಮತ್ತು ಇತರರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಶಿಕ್ಷಕಕರು ಸಿಬ್ಬಂದಿಯವರು ಹಾಜರಿದ್ದರು.
ಹಣಮಪ್ಪ ಮರಿಚಣ್ಣವರ ಸ್ವಾಗತಿ-ದರು, ಬಸವರಾಜ ವ್ಯಾಪಾರಿ ಕಾರ್ಯಕ್ರಮ ನಿರ್ವಹಿಸಿದರು, ಪಾಂಡುರಂಗ ವಂದಿಸಿದರು.

# ಬಿ.ಕೆ. ಹರಿಪ್ರಸಾದ್ ಹೆಗಲಿಗೆ ಕೆಪಿಸಿಸಿ ಸಾರಥ್ಯ...

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಸಚಿವ ಸ್ಥಾನ ಹಾಗೂ ಪಕ್ಷದ ಅಧ್ಯಕ್ಷ ಹುದ್ದೆ ಎರಡರ ಮೇಲೂ ಕಣ್ಣಿಟ್ಟಿದ್ದ ಸತೀಶ್‌ಜಾರಕಿ ಹೊಳಿಯವರಿಗೆ ಹೈಕಮಾಂಡ್ ಶಾಕ್ ನೀಡಿದ್ದು, ಸಚಿವ ಸ್ಥಾನಕ್ಕೆ ಸಿಮಿತಗೊಳಿಸಿದೆ. ಕೆಪಿಸಿಸಿ ಸಾರಥ್ಯವನ್ನು ಬಿ.ಕೆ. ಹರಿಪ್ರಸಾದ್ ಅವರ ಹೆಗಲಿಗೆ ಹೊರಿಸಲು ಮುಂದಾಗಿದೆ. ವಿಧಾನಪರಿಷತ್ ಸದಸ್ಯರಾಗಿರುವ ಹರಿಪ್ರಸಾದ್ ಅವರ ಅಧಿಕಾರಾವಧಿ ಇದೇ ತಿಂಗಳ 30ಕ್ಕೆ ಮುಕ್ತಾಯವಾಗಲಿದೆ. ಅವರನ್ನು ರಾಜ್ಯಸಭೆಗೆ ಚುನಾಯಿಸುವ ಮೂಲಕ, ಕೆಪಿಸಿಸಿ ಅಧ್ಯಕ್ಷರನ್ನಾಗಿ ನೇಮಿಸಿದೆ.**



ಸತೀಶ್ ಜಾರಕಿಹೊಳಿ ಅವರು 2028ರ ವಿಧಾನಸಭಾ ಚುನಾವಣೆ ಬಳಿಕ ಮುಖ್ಯಮಂತ್ರಿ ಸ್ಥಾನ ಕೇಳುವುದಾಗಿ ಪದೇಪದೇ ಹೇಳುತ್ತಿದ್ದರು. ಅದಕ್ಕೆ ಪೂರ್ವ ತಯಾರಿಯಂತೆ ಪಕ್ಷದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವ ಇರಾದೆಯಲ್ಲಿದ್ದರು. ಆದರೆ 2028ರ ಬಳಿಕವೂ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಡಿ.ಕೆ.ಶಿವಕುಮಾರ್ ಅವರು, ತಮ ಪ್ರತಿ ಸ್ಪರ್ಧಿಗಳನ್ನು ಆರಂಭದಿಂದಲೇ ನಿಯಂತ್ರಿಸಲಾರಂಭಿಸಿದ್ದಾರೆ. ಸಿದ್ದರಾಮಯ್ಯ ಅವರ ಬಣದಲ್ಲಿ ಪ್ರಮುಖ ನಾಯಕರಾಗಿರುವ ಸತೀಶ್ ಜಾರಕಿಹೊಳಿ ಇತ್ತೀಚಿನ ರಾಜ್ಯ ಬೆಳವಣಿಗೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ರಾಜಕೀಯ ಗೊಂದಲಗಳನ್ನು ಹೈಕಮಾಂಡ್ ಬಗೆಹರಿಸಬೇಕೆಂದು ಪದೇ ಪದೇ ಒತ್ತಾಯಿಸುತ್ತಿದ್ದರು.

ಆ ಸಂದರ್ಭದಲ್ಲಿ ರಾಜಕೀಯ ಗೊಂದಲಗಳನ್ನು ಬಗೆಹರಿಸಿ ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮುಂದುವರೆಸಬೇಕು ಎಂಬುದು ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ, ಪರಮೇಶ್ವರ್ ಹಾಗೂ ಇನ್ನೂ ಕೆಲವರ ಬಯಕೆಯಾಗಿತ್ತು. ಅದಕ್ಕಾಗಿಯೇ ಪದೇಪದೇ ಹೇಳಿಕೆಗಳನ್ನು ನೀಡುತ್ತಿದ್ದರು. ಆದರೆ ತಮ ಹೇಳಿಕೆಗಳೇ ಸಿದ್ದರಾಮಯ್ಯ ಅವರ ಪದಚ್ಯುತಿಗೆ ಕಾರಣವಾಗಲಿದೆ ಎಂದು ಸತೀಶ್ ಜಾರಕಿಹೊಳಿ ಮತ್ತು ಇತರರು ನಿರೀಕ್ಷಿಸಿರಲಿಲ್ಲ. ಹೈಕಮಾಂಡ್‌ನ ಅನಿರೀಕ್ಷಿತ ನಿರ್ಧಾರ ಸಿದ್ದರಾಮಯ್ಯ ಬೆಂಬಲಿಗರಿಗೆ ತೀವ್ರ ಆಘಾತ ಮೂಡಿಸಿದೆ. ಕನಿಷ್ಠ ಪಕ್ಷ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನಾದರೂ ಧಕ್ಕಿಸಿಕೊಳ್ಳಲು ಜಾರಕಿಹೊಳಿ ಪ್ರಯತ್ನ ಪಟ್ಟಿದ್ದರು. ಆದರೆ ಅದು ಕೂಡ ಸಾಧ್ಯವಾಗಿಲ್ಲ.

ಮೂಲ ಕಾಂಗ್ರೆಸ್ಸಿಗರು ಹಾಗೂ ತತ್ವ ಸಿದ್ಧಾಂತಕ್ಕೆ ಕಟಿ ಬದ್ಧರಾಗಿರುವ ಹರಿಪ್ರಸಾದ್ ಅವರಿಗೆ ಹೈಕಮಾಂಡ್ ಮಣೆ ಹಾಕಲು ಮುಂದಾಗಿದೆ. ನೂತನ ಮುಖ್ಯಮಂತ್ರಿಯವರ ಜೊತೆ ಹೊಂದಾಣಿಕೆ ಮಾಡಿಕೊಂಡು ರಾಜ-ಕಾರಣ ಮಾಡುವ ಹಾಗೂ ಪಕ್ಷ ಸಂಘಟನೆಯಲ್ಲಿ ಅನುಭವ ಇರುವ ಹರಿಪ್ರಸಾದ್ ಅವ-ರಿಗೆ ಅವಕಾಶ ನೀಡುವ ಚರ್ಚೆಗಳಾಗಿವೆ. ಹರಿಪ್ರಸಾದ್ ಈ ಮೊದಲು ಗುಜರಾತ್ ಸೇರಿದಂತೆ ಹಲವು ರಾಜ್ಯಗಳ ಕಾಂಗ್ರೆಸ್ ಉಸ್ತುವಾರಿ ನಿರ್ವಹಿಸಿದ್ದರು. ಒಂದು ಹಂತದಲ್ಲಿ ಸಿದ್ದರಾಮಯ್ಯ ಅವರ ಬಣದ ಪ್ರಬಲ ಪ್ರತಿಪಾದಕರಾಗಿದ್ದರು. ಡಿ.ಕೆ.ಶಿವಕುಮಾರ್ ಮತ್ತು ಹರಿಪ್ರಸಾದ್ ಅವರ ಸಂಬಂಧ ಅಷ್ಟಕಷ್ಟೇ ಎಂಬ ಚರ್ಚೆಗಳಿದ್ದವು. ಆದರೆ ಕಳೆದ ಎರಡು ತಿಂಗಳ ಹಿಂದೆ ಡಿ.ಕೆ.ಶಿವಕುಮಾರ್ ಮತ್ತು ಹರಿಪ್ರಸಾದ್ ಪರಸ್ಪರ ಭೇಟಿಯಾಗಿ ಮಹತ್ವದ ಮಾತುಕತೆ ನಡೆಸಿದ್ದರು.

# ತಂಬಾಕು ಸೇವನೆ ಜನರ ಆರೋಗ್ಯಕ್ಕೆ ಮತ್ತು ಪರಿಸರಕ್ಕೆ ಮಾರಕ: ಬಸವರಾಜ ಎಸ್ ಎಂ.,,

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಭಾರತ ದೇಶ ಹಳ್ಳಿಗಳಿಂದ ಕೂಡಿದ ದೇಶ ಇಂತಹ ದೇಶದಲ್ಲಿ ಗುಟಕಾ, ತಂಬಾಕು, ಬಿಡಿ ಸಿಗರೇಟ್ ಇವುಗಳ ಸೇವನೆಯಿಂದ ಜನರ ಆರೋಗ್ಯದ ಮೇಲೆ ಮಾತ್ರ ಪರಿಣಾಮ ಉಂಟು ಮಾಡುವುದಲ್ಲದೆ ಪರಿಸರದ ಮೇಲೇಯು ಸಹ ಪರಿಣಾಮ ಉಂಟುಮಾಡುತ್ತದೆ. ಇಂದಿನ ಯುವಜನತೆಗೆ ತಂಬಾಕು ಮಾರಕವಾಗಿರುತ್ತದೆ.**

ಸಾಕಷ್ಟು ರೀತಿಯಲ್ಲಿ ಕಿರು ವಯಸ್ಸಿನಲ್ಲೇ ರೋಗರುಜನೆಗಳಿಗೆ ಬಲಿಯಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತವೆ ಎಂದರು. ಇವರು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಾನೂನು ಮಹಾವಿದ್ಯಾಲಯದ ಯುವ ರೆಡ್ ಕ್ರಾಸ್ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಕೊಪ್ಪಳ ಜಿಲ್ಲೆಯ ಮತ್ತೂರು ಗ್ರಾಮದಲ್ಲಿ ವಿಶ್ವ ತಂಬಾಕು ಮುಕ್ತ ದಿನಾಚರಣೆಯ ಅಂಗವಾಗಿ ಮಾತನಾಡುತ್ತಾ ಹಳ್ಳಿಗಳಲ್ಲಿ ಯುವಶಕ್ತಿ ಬಲಿಯಾಗಲು ಮುಖ್ಯ ಕಾರಣ ಇಂದಿನ ದುಶ್ಚಟಗಳು ಅದಕ್ಕೆ ನೀವು ಬಲಿಯಾಗದಿರಿ ತಂಬಾಕಿನಿಂದ ಬಾಯಿಯ ಕ್ಯಾನ್ಸರ್ ನಾಲಿಗೆ, ಧ್ವನಿಪೆಟ್ಟಿಗೆ ಮತ್ತು ಗಂಟಲಕುಳಿ, ಅನ್ನನಾಳ, ಹೊಟ್ಟೆ, ಪಿತ್ತಕೋಶ, ಮೂತ್ರಕೋಶ, ಗರ್ಭಾಶಯದ ಗರ್ಭಕಂಠ ಮತ್ತು ಶ್ವಾಸಕೋಶದ ಕ್ಯಾನ್ಸರ್. ಹೃದಯ-ನಾಳೀಯ ಕಾಯಿಲೆಗಳು ಮತ್ತು ದೀರ್ಘಕಾಲದ ಪ್ರತಿರೋಧಕ ಶ್ವಾಸಕೋಶದ ಕಾಯಿಲೆಗಳು ಕ್ಷಯರೋಗದೊಂದಿಗೆ ಸಂಬಂಧ ಹೊಂದಿವೆ 40% ಟಿಬಿ ಮತ್ತು ಇತರ ಸಂಬಂಧಿತ ಕಾಯಿಲೆಗಳು ತಂಬಾಕು ಸೇವನೆಯಿಂದಾಗಿವೆ.



ಕಡಿಮೆ ಜನನ ತೂಕದ ಮಕ್ಕಳು. ಪುರುಷರಲ್ಲಿ ಫಲವತ್ತತೆ ಮತ್ತು ಲೈಂಗಿಕ ದುರ್ಬಲತೆ ಕಡಿಮೆಯಾಗುತ್ತದೆ ಆರಂಭಿಕ ವಯಸ್ಸಾದ ಮತ್ತು ಚರ್ಮದ ಸುಕ್ಕು,ಜನನ ಮತ್ತು ಪ್ರಬುದ್ಧ ಪೂರ್ವ ಸಾವುಗಳು ಸಂಭವಿಸುತ್ತವೆ.

ಅಷ್ಟೇ ಅಲ್ಲದೆ ಪುರುಷರಲ್ಲಿ 50% ಕ್ಯಾನ್ಸರ್ ಮತ್ತು ಮಹಿಳೆಯರಲ್ಲಿ 20% ಕ್ಯಾನ್ಸರ್ಗಳು ತಂಬಾಕು ಬಳಕೆಯಿಂದ ಉಂಟಾಗಿದೆ ನೀವು ತಂಬಾಕಿನ ಬಳಕೆಯಿಂದ ಮಕ್ತರಾಗಬೇಕೆಂದು ಊರಿನ ಗ್ರಾಮಸ್ಥರಿಗೆ ತಿಳಿಹೇಳಿದರು. ಕಾನೂನು ಮಹಾವಿದ್ಯಾಲಯದ ಯುವ ರೆಡ್ ಕ್ರಾಸ್ ಘಟಕದ 50ಕ್ಕೂ ಹೆಚ್ಚು ಸ್ವಯಂಸೇವಕರು ಪ್ರತಿ ಮನೆಮನೆಗೂ ಭೇಟಿ ನೀಡಿ ತಂಬಾಕಿನಿಂದ ಉಂಟಾಗುವ ಪರಿಣಾಮ, ಅನಾಹುತಗಳು ಮತ್ತು ರೋಗಗಳ ಕುರಿತು ಕುಟುಂಬದ ಸದಸ್ಯರೆಲ್ಲರಿಗೂ ಮಾಹಿತಿಯನ್ನು ತಿಳಿಸಲ್ಪಟ್ಟರು. ಅಷ್ಟೇ ಅಲ್ಲದೆ ಮತ್ತೂರು ಗ್ರಾಮದ ಸಾರ್ವಜನಿಕ ಸ್ಥಳಗಳಲ್ಲಿ ಸೇರಿದ ಜನರು ಮತ್ತು ಹಿರಿಯರೊಂದಿಗೆ ಸಮಾಲೋಚಿಸಿ ಗ್ರಾಮದಲ್ಲಿ ತಂಬಾಕು, ಗುಟುಕ, ಬೀಡಿ ಮತ್ತು ಸಿಗರೇಟಗಳಿಂದ ಜನರ ಆರೋಗ್ಯಕ್ಕೆ ಉಂಟಾಗುವ ಪರಿಣಾಮಗಳ ಕುರಿತು ಮಾಹಿತಿಯನ್ನು ನೀಡಿದರು.

ತಂಬಾಕು ಸೇವಿಸುವುದರಿಂದ ಕ್ಯಾನ್ಸರ್, ಹೃದಯಘಾತ ಶ್ವಾಸಕೋಶದ ತೊಂದರೆ, ಗಂಟಲು, ಬಾಯಿ ಕ್ಯಾನ್ಸರ್ ಮುಂತಾದ ರೋಗಗಳು ಉಂಟಾಗುತ್ತವೆ. ಅದೇ ರೀತಿ ಧೂಮಪಾನದಿಂದ ಆರೋಗ್ಯ ಸಂಪೂರ್ಣವಾಗಿ ನಶಿಸುತ್ತದೆ ಇದರಿಂದ ಆಸ್ಪತ್ರೆಗಳಿಗೆ ಸಾಕಷ್ಟು ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ಉಂಟಾಗುತ್ತದೆ ಮತ್ತು ಕುಟುಂಬದ ಸದಸ್ಯರು ಸಾಕಷ್ಟು ಆರ್ಥಿಕ ತೊಂದರೆಯನ್ನುಂಟು ಎದುರಿಸಬೇಕಾಗುತ್ತದೆ ಆದ್ದರಿಂದ ಮತ್ತೂರು ಗ್ರಾಮವನ್ನು ತಂಬಾಕು ಮುಕ್ತ ಗ್ರಾಮವನ್ನಾಗಿ ಮಾಡಲು ಗ್ರಾಮಸ್ಥರು ಸಹ ಸಾಕಷ್ಟು ರೀತಿಯಲ್ಲಿ ನಮಗೆ ಸಹಕರಿಸಿಬೇಕೆಂದು ವಿನಂತಿಸಿಕೊಂಡರು.

## ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪದಗ್ರಹಣಕ್ಕೆ ಕ್ಷಣಗಣನೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಉಪ ಮುಖ್ಯಮಂತ್ರಿಯಾಗಿದ್ದ ಡಿ.ಕೆ.ಶಿವಕುಮಾರ್ ಇಂದು ಮುಖ್ಯಮಂತ್ರಿಯಾಗಿ 12 ಜನ ಸಚಿವರೊಂದಿಗೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.ಲೋಕಭವನದಲ್ಲಿ ಸಂಜೆ 4.05ಕ್ಕೆ ನಡೆಯುವ ಸರಳ ಹಾಗೂ ಅರ್ಥಪೂರ್ಣ ಸಮಾರಂಭಕ್ಕಾಗಿ ಭಾರೀ ಸಿದ್ಧತೆಗಳು ನಡೆದಿವೆ. ಜ್ಯೋತಿಷಿಗಳ ಸಲಹೆ ಮೇರೆಗೆ ವೇದಿಕೆಯನ್ನು ಸಜ್ಜುಗೊಳಿಸಲಾಗಿದೆ. ಎಐಸಿಸಿಯ ಪ್ರಮುಖ ನಾಯಕರು, ಖ್ಯಾತ ಚಲನಚಿತ್ರ ನಟ-ನಟಿಯರು ಸೇರಿದಂತೆ ಸುಮಾರು 1 ಸಾವಿರ ಗಣ್ಯರಿಗೆ ಆಹ್ವಾನ ನೀಡಲಾಗಿದೆ.**



ಡಿ.ಕೆ.ಶಿವಕುಮಾರ್ ಅವರು ಇಂದು ಬೆಳಗ್ಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಮನೆಗೆ ಭೇಟಿ ನೀಡಿ, ಆಶೀರ್ವಚನ ಪಡೆಯಲಿದ್ದು, ಕಾರ್ಯಕ್ರಮಕ್ಕೆ ಆಹ್ವಾನ ನೀಡಲಿದ್ದಾರೆ. ಪ್ರಮಾಣವಚನ ಸ್ವೀಕಾರ ಬಳಿಕ, ಎಲ್ಲಾ ಮಾಜಿ ಮುಖ್ಯಮಂತ್ರಿಗಳು ಕೆಪಿಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಲಿದ್ದಾರೆ. ಪ್ರಮಾಣವಚನ ಕಾರ್ಯಕ್ರಮಕ್ಕಾಗಿ ಲೋಕ ಭವನದವರೆಗೆ ಸುಮಾರು 5 ಸಾವಿರ ಜನರಿಗಾಗುವಷ್ಟು ಸ್ಥಳಾವಕಾಶ ಕಲ್ಪಿಸಲಾಗಿದೆ. ಸಂಚಾರ ವ್ಯವಸ್ಥೆ, ವಾಹನ ನಿಲುಗಡೆಯನ್ನು ಬದಲಾವಣೆ ಮಾಡಲಾಗಿದೆ. ವೇದಿಕೆಯ ಮೇಲೆ 20 ಜನರಿಗೆ ಆಸನ ವ್ಯವಸ್ಥೆ, ಸಮೀಪದಲ್ಲೇ 40ಕ್ಕೂ ಹೆಚ್ಚು ವಿವಿಧ ಧರ್ಮಗಳ ಮಠಾದೀಶರು, ಫಾದರ್‌ಗಳು, ಮೌಲ್ವಿಗಳು ಹಾಗೂ ಸಂತರಿಗೆ ವ್ಯವಸ್ಥೆ ಮಾಡಲಾಗಿದೆ. ಲೋಕಭವನದ ಒಳಗಡೆ ವಾಹನ ನಿಲುಗಡೆಯನ್ನು ಸಂಪೂರ್ಣ ನಿರ್ಬಂಧಿಸಲಾಗಿದ್ದು, ಮುಖ್ಯ ದ್ವಾರದಿಂದ ಸಭಾಂಗಣದವರೆಗೂ ವಿಐಪಿಗಳನ್ನು ಕರೆದೊಯ್ಯಲು ಎಲೆಕ್ಟ್ರಿಕ್ ವಾಹನಗಳನ್ನು ಸಜ್ಜುಗೊಳಿಸಲಾಗಿದೆ. ಮತದಾರರ ನೋಂದಣಿ ಮಾರ್ಗದರ್ಶಿ ಡಿ.ಕೆ.ಶಿವಕುಮಾರ್ ಅವರ ಜೀವನದ ಅಮೃತಗಳಿಗೆಗಾಗಿ ನಾಡಿನ ವಿವಿಧ ಮಠಗಳು, ಧಾರ್ಮಿಕ ಸಂಸ್ಥೆಗಳು ಶುಭ ಹಾರೈಸಿವೆ. ಮೈಸೂರಿನ ಸುತ್ತೂರು ಮಠದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಪ್ರಸಾದ, ಫಲಪುಷ್ಪಗಳನ್ನು ಆಶೀರ್ವಚನ ರೂಪದಲ್ಲಿ ಡಿ.ಕೆ.ಶಿವಕುಮಾರ್ ಅವರಿಗೆ ಕಳುಹಿಸಲಾಗಿದೆ. ನಿನ್ನೆ ತಡರಾತ್ರಿ 11ಗಂಟೆಯಿಂದ 2ಗಂಟೆಯವರೆಗೂ ಡಿ.ಕೆ.ಶಿವಕುಮಾರ್, ಪತ್ನಿ ಉಷಾರವರ ಜೊತೆಗೂಡಿ ನಾಗರಬಾವಿಯಲ್ಲಿರುವ ಅಜ್ಜಯ್ಯನ ಪೀಠಕ್ಕೆ ತೆರಳಿ, ವಿಶೇಷ ಪೂಜೆ ಸಲ್ಲಿಸಿದ್ದರು. ಅಲ್ಲಿನ ಶ್ರೀಗಳ ಜೊತೆಗೆ ಸುದೀರ್ಘ ಸಮಾಲೋಚನೆ ನಡೆಸಿ, ಸಲಹೆ ಸೂಚನೆ ಪಡೆದಿದ್ದಾರೆ. ಲೋಕಭವನಕ್ಕೆ ಪಟ್ಟಿ ರವಾನೆ: ಎರಡು ಹಂತದಲ್ಲಿ ಸಚಿವ ಸಂಪುಟ ರಚನೆಯಾಗಲಿದ್ದು, ಸಂಭವನೀಯ ಸಚಿವರ ಕುರಿತು ನಿನ್ನೆ ಹೈಕಮಾಂಡ್ ಜೊತೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಸಮಗ್ರ ಚರ್ಚೆ ನಡೆಸಿದ್ದರು. ಬಹುತೇಕ ಮೊದಲ ಹಂತದಲ್ಲಿ 12 ಮಂದಿ ಸಚಿವರ ಪಟ್ಟಿಗೆ ಹೈಕಮಾಂಡ್ ಹಸಿರು ನಿಶಾನೆ ತೋರಿಸಿದೆ. ಆ ಪಟ್ಟಿಯನ್ನು ಇಂದು ಬೆಳಗ್ಗೆ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರು ಪ್ರಮಾಣವಚನ ಬೋಧಿಸಲಿರುವ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ರವಾನಿಸಿದ್ದಾರೆ. ಮೂಲಗಳ ಪ್ರಕಾರ ಡಾ.ಜಿ.ಪರಮೇಶ್ವರ್, ಕೆ.ಜೆ.ಜಾರ್ಜ್, ಕೃಷ್ಣ ಭೈರೇಗೌಡ, ರಾಮಲಿಂಗಾರೆಡ್ಡಿ, ಎಂ.ಬಿ.ಪಾಟೀಲ್, ಪ್ರಿಯಾಂಕ್ ಖರ್ಗೆ, ಕೆ.ಎಚ್.ಮುನಿಯಪ್ಪ, ಸತೀಶ್‌ಜಾರಕಿಹೊಳಿ, ದಿನೇಶ್ ಗುಂಡೂರಾವ್, ಶರಣಪ್ರಕಾಶ್ ಪಾಟೀಲ್, ಯು.ಟಿ.ಖಾದರ್, ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹೆಸರುಗಳ ಪಟ್ಟಿಯನ್ನು ಡಿ.ಕೆ.ಶಿವಕುಮಾರ್ ರಾಜ್ಯಭವನಕ್ಕೆ ಕಳುಸಿದ್ದಾರೆ ಎನ್ನಲಾಗಿದೆ. ವಿಧಾನ ಸಭಾಧ್ಯಕ್ಷರಾಗಿರುವ ಯು.ಟಿ.ಖಾದರ್ ಇಂದು ಮ ಧ್ಯಾಹ್ನ ಉಪಾಧ್ಯಕ್ಷ ರುದ್ರಪ್ಪ ಲಮಾಣಿಯವರಿಗೆ ತಮ ರಾಜೀನಾಮೆ ಪತ್ರವನ್ನು ಸಲ್ಲಿಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರುಗಳಿಗೆ ರಾಜ್ಯ ಭವನಕ್ಕೆ ಬರುವಂತೆ ಸಂದೇಶ ರವಾನೆಯಾಗಿದೆ.

# ಶಿಕ್ಷಣ ರಂಗದಲ್ಲಿ ಛತ್ರದ ಸೇವೆ ಅನನ್ಯ :ಕೊರ್ಲಳ್ಳಿ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಕಳೆದ 23 ವರ್ಷಗಳಲ್ಲಿ ಪ್ರಾಚಾರ್ಯ ಕೆ.ಛತ್ರದ ರವರು ಮೊದಲು ಉಪನ್ಯಾಸಕರಾಗಿ ನಂತರ ಪ್ರಾಧ್ಯಾಪಕರಾಗಿ ಅದಾದ ಬಳಿಕ ಒಂಬತ್ತು ವರ್ಷ ಪ್ರಾಚಾರ್ಯರಾಗಿ ದಕ್ಷತೆ, ಪ್ರಾಮಾಣೀಕತೆಯಿಂದ ಕಾರ್ಯನಿರ್ವಹಿಸಿದ್ದು ಶೈಕ್ಷಣಿಕ ರಂಗದಲ್ಲಿ ಛತ್ರದ ಸೇವೆ ಅನನ್ಯ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪಾಧ್ಯಕ್ಷ ಸುಧೀರ ಕೊರ್ಲಳ್ಳಿ ಹೇಳಿದರು.**

ಅವರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೂರು ವರ್ಷ ಪ್ರಾಚಾರ್ಯರಾಗಿ ನಿವೃತ್ತರಾದ ಕೆ.ಛತ್ರದ ರವರ ಬೀಳ್ಕೊಡುವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಕೆ.ಛತ್ರದ ರವರು ಹುಲೇಗುಡ್ಡ ದಂತಹ ಸಾಮಾನ್ಯ ಹಳ್ಳಿಯಲ್ಲಿ ಜನಿಸಿ ಇಡೀ



ಜಿಲ್ಲೆಯಲ್ಲಿಯೇ ಛತ್ರದ ರವರು ತಮ್ಮದೇ ಆದ ಅಪರೂಪದ ಕಾರ್ಯದ ಮೂಲಕ ತಾವು ಈ ಜಿಲ್ಲೆಯ ಇರಕಲ್ಲಗಡ, ಹಿರೇವಂಕಲಕುಂಟಾ, ತಳಬಾಳ ಪದವಿ ಕಾಲೇಜುಗಳಿಗೆ ಪ್ರಾಚಾರ್ಯರಾಗಿ ಉತ್ತಮ ಸೇವೆ ಸಲ್ಲಿಸುವ ಮೂಲಕ ಜನಮನ್ನಣೆ ಗಳಿಸಿದ್ದಾರೆ ಎಂದರು.

ನಿವೃತ್ತರಾದ ಬಳಿಕ ಸನ್ಮಾನ ಸ್ವೀಕರಿಸಿ ನಾತನಾಡಿದ ಕೆ.ಛತ್ರದ ನಾನು ರೈತ ಕುಟುಂಬದಿಂದ ಜನಿಸಿ ಕಳೆದ ಎರಡುವರೇ ದಶಕಗಳ ಕಾಲ ಶೈಕ್ಷಣಿಕ ರಂಗದಲ್ಲಿ ನನ್ನದೇ ಆದ ಇತಿಮಿತಿಯೊಳಗೆ ಕಾರ್ಯನಿರ್ವಹಿಸಿದ್ದು ತೃಪ್ತಿ ತಂದಿದೆ. ವಿಶೇಷವಾಗಿ ನನ್ನ ತಾಲೂಕಿನಲ್ಲಿಯೇ ನಾನು ಶಿಕ್ಷಣ ರಂಗದಲ್ಲಿ ಸೇವೆ ಸಲ್ಲಿಸಿರುವುದು ಅತೀವ ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ಪತ್ರಕರ್ತ ಮಹಾಂತೇಶ ಚಲವಾದಿ, ಕನ್ನಡಪರ ಹೋರಾಟಗಾರ ಸ.ಶರಣಪ್ಪ ಪಾಟೀಲ್ ಕರಮುಡಿ, ನಿವೃತ್ತ ಪ್ರಾಚಾರ್ಯ ವೈ.ಜಿ. ಜನಾದ್ರಿ, ಸಿ.ಡಿ.ಸಿ. ಸದಸ್ಯರಾದ ರಹಿಮಾನಸಾಬ ನಾಯಕ, ಮಾತನಾಡಿದರು. ಈ ಸಂದರ್ಭದಲ್ಲಿ ಸಿ.ಡಿ.ಸಿ. ಸದಸ್ಯ ವಿಕಾಸ ಉಳ್ಳಾಗಡ್ಡಿ, ಕಳಕಪ್ಪ ಸಿದ್ದಪ್ಪ ಕುಂರಿ, ಬಸವರಾಜ ಒಂಡೆಲಿ, ವಿರುಪಾಕ್ಷಪ್ಪ ಗಂಧದ ಇನ್ನು ಮುಂತಾದವರು ಉಪಸ್ಥಿತರಿದ್ದರು.

# ಉತ್ತಮ ಗ್ರಾಮ ಲೆಕ್ಕಾಧಿಕಾರಿ ಶ್ರೀ ಗಂಗಪ್ಪ ನೇಗಿಲಿ ಇವರ ವರ್ಗಾವಣೆ ಹಿಂಪಡೆದು ಯಥಾ ಸ್ಥಾನದಲ್ಲಿ ಮುಂದುವರೆಸಲು ಒತ್ತಾಯ




ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ತಾಲೂಕಿನ ಪನ್ನಾಪುರ ಗ್ರಾಮ ಲೆಕ್ಕಾಧಿಕಾರಿಯಾದ ಶ್ರೀಯುತ ಗಂಗಪ್ಪ ನೇಗಿಲಿ ಅವರನ್ನು ಪನ್ನಾಪುರದಿಂದ ಕಾರಟಗಿ ಗ್ರಾಮ ಆಡಳಿತ ಅಧಿಕಾರಿಯನ್ನಾಗಿ ವರ್ಗಾವಣೆ ಮಾಡಿರುವುದು ತುಂಬಾ ಬೇಸರದ ಸಂಗತಿ. ಕಳೆದ ಸುಮಾರು 8 ವರ್ಷಗಳಿಂದ ಪನ್ನಾಪುರ ಗ್ರಾಮ ಲೆಕ್ಕಾಧಿಕಾರಿಯಾಗಿ ಯಾವುದೇ ಕಪ್ಪು ಚುಕ್ಕಿ ಇಲ್ಲದೆ ಜನಗಳ ವಿಶ್ವಾಸ ಅರ್ಹತೆ ಗಳಿಸಿ ಕಂದಾಯ ಇಲಾಖೆ ವಹಿಸಿಕೊಟ್ಟಿರುವ ಕರ್ತವ್ಯವನ್ನು ಜವಾಬ್ದಾರಿಯನ್ನು ಮೈಗೂಡಿಸಿಕೊಂಡು ಉತ್ತಮವಾಗಿ ಕೆಲಸ ನಿರ್ವಹಿಸಿರುತ್ತಾರೆ.**

ಆದರೆ ಮೇ 30ರಂದು ಮಾನ್ಯ ಜಿಲ್ಲಾಧಿಕಾರಿಗಳವರು ಇವರನ್ನು ಪನ್ನಾಪುರ ಗ್ರಾಮದಿಂದ ಕಾರಟಗಿಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿರುವುದು ಯಾಕೆ ಎಂದು ಸಾರ್ವಜನಿಕರಲ್ಲಿ ಅನುಮಾನ ಹುಟ್ಟಿಕೊಂಡಿದೆ. ಈ ಕುರಿತು ಸಾಮಾಜಿಕ ಹೋರಾಟಗಾರ ಸುಂದರರಾಜ್ ಇವರು ಜಿಲ್ಲಾಧಿಕಾರಿಗಳ ನಡೆಯನ್ನು ಪ್ರಶ್ನಿಸಿದ್ದಾರೆ.ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ವರ್ಗಾವಣೆ ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವ ಜಿಲ್ಲಾಧಿಕಾರಿಗಳು ಶ್ರೀಯುತ ಗಂಗಪ್ಪ ನೇಗಿಲಿ ಅವರ ಕರ್ತವ್ಯ ಲೋಪವಾದರೂ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಆಡಳಿತಾತ್ಮಕ ಹಿತ ದೃಷ್ಟಿ ಎನ್ನುವ ಕಾರಣ ಹೇಳುವುದಾದರೆ ಕಂದಾಯ ಇಲಾಖೆಯ ಅದ್ಯಾವ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರು ಎನ್ನುವುದನ್ನು ಜಿಲ್ಲಾಧಿಕಾರಿಗಳ ಸ್ಪಷ್ಟಪಡಿಸಬೇಕು. ಉತ್ತಮ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಇವರನ್ನು ಸಕಾರಣ ಇಲ್ಲದೆ ವರ್ಗಾವಣೆ ಮಾಡಿರುವುದರ ಹಿಂದೆ ರಾಜಕೀಯ ಪ್ರಭಾವ ಕೆಲಸ ಮಾಡಿದೆಯಾ ಅಥವಾ ಪ್ರಭಾವಿಗಳ ಪ್ರಭಾವಕ್ಕೆ ಹಿರಿಯ ಅಧಿಕಾರಿಗಳು ಒಳಗಾದರೆ ಎನ್ನುವ ಗುಮಾನಿ ಸಾರ್ವಜನಿಕರಲ್ಲಿದೆ.

ಆಡಳಿತಾತ್ಮಕ ಹಿತದೃಷ್ಟಿ ಎನ್ನುವುದಾದರೆ ಸುಮಾರು ಒಂದು ದಶಕದಿಂದಲೂ ಕಾರಟಗಿ ಕಂದಾಯ ಇಲಾಖೆಯಲ್ಲಿ ಬೇರು ಬಿಟ್ಟಿರುವ ಎಲ್ಲಾ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿ ಎಂದಿದ್ದಾರೆ. ಅತ್ಯುತ್ತಮ ಗ್ರಾಮ ಲೆಕ್ಕಾಧಿಕಾರಿ ಅವರ ವರ್ಗಾವಣೆಯನ್ನು ಈ ಕೂಡಲೇ ಹಿಂಪಡೆಯಬೇಕು. ಶ್ರೀಯುತ ಗಂಗಪ್ಪ ನೇಗಿಲಿ ಇವರನ್ನು ಪನ್ನಾಪುರ ಗ್ರಾಮ ಲೆಕ್ಕಾಧಿಕಾರಿಯಾಗಿ ಮುಂದುವರಿಸಲು ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದ್ದಾರೆ

# ದೇವರ ಹೆಸರಿನಲ್ಲಿ ಕರ್ನಾಟಕದ 18ನೇ ಸಿಎಂ ಆಗಿ ಡಿಕೆ ಶಿವಕುಮಾರ್ ಪ್ರಮಾಣ ವಚನ ಸ್ವೀಕಾರ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ದೇವರ ಹೆಸರಿನಲ್ಲಿ ಡಿಕೆ ಶಿವಕುಮಾರ್ ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರಮಾಣ ವಚನ ಬೋಧಿಸಿದರು.**

ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರಿಂದ ಪಟಾಕಿ ಸಿಡಿಸುವಿಕೆ ಮತ್ತು ಹರ್ಷೋದ್ಗಾರಗಳ ನಡುವೆ, ಡಿಕೆ ಶಿವಕುಮಾರ್ ಕರ್ನಾಟಕದ 18 ನೇ ಮುಖ್ಯಮಂತ್ರಿಯಾಗಿ



ಸಂಜೆ 4.15 ಕ್ಕೆ ಪ್ರಮಾಣ ವಚನ ಸ್ವೀಕರಿಸಿದರು. ಭಾರತದ ಸಂವಿಧಾನದ ಪ್ರತಿಯನ್ನು ಹಿಡಿದುಕೊಂಡು ಅಜ್ಜಯ್ಯ ಸ್ವಾಮೀಜಿಯವರ ಛಾಯಾಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪ್ರಮಾಣ ವಚನ ಸ್ವೀಕರಿಸಿದರು. ಡಿಕೆ ಶಿವಶಿ ತಮ್ಮ ಆಧ್ಯಾತ್ಮಿಕ ಗುರು ವೀರಗಂಗಾಧರಾಚಾರ್ ಅವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.


ಡಿಕೆ ಶಿವಕುಮಾರ್ ಅವರ ನಂತರ, ಡಾ. ಜಿ ಪರಮೇಶ್ವರ್, ಕೆಎಚ್ ಮುನಿಯಪ್ಪ, ಕೆಜೆ ಜಾರ್ಜ್, ಎಂಬಿ ಪಾಟೀಲ್, ರಾಮಲಿಂಗ ರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಯುಟಿ ಖಾದರ್, ಈಶ್ವರ್ ಖಂಡ್ರೆ, ಯತೀಂದ್ರ ಸಿದ್ದರಾಮಯ್ಯ, ಭೈರತಿ ಸುರೇಶ್ ಮತ್ತು ಶರಣ್ ಪ್ರಕಾಶ್ ಪಾಟೀಲ್ ಪ್ರಮಾಣ ವಚನ ಸ್ವೀಕರಿಸಿದರು.

# ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ ಮಾಡತ್ತಾರಾ ಸಿಎಂ ಡಿಕೆಶಿ..?

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸುತ್ತಿದ್ದಂತೆ ಆಡಳಿತ ವರ್ಗಕ್ಕೆ ಹೊಸ ರೂಪ ನೀಡಲು ಮುಂದಾಗಿದ್ದು, ಪ್ರಮುಖವಾಗಿ ಗೃಹ ಇಲಾಖೆಗೆ ಮೇಜರ್ ಸರ್ಜರಿ ನಡೆಸಲು ತೀರ್ಮಾನಿಸಿದ್ದಾರೆ.**

ಬಹುಮುಖ್ಯವಾಗಿ ಬೆಂಗಳೂರು ನಗರ ಪೊಲೀಸ್ ಕಮಿಷನರ್, ಗುಪ್ತಚರ ವಿಭಾಗ, ಕಾನೂನು ಮತ್ತು ಸುವ್ಯವಸ್ಥೆ, ಸಿಐಡಿ, ಆಂತರಿಕ ಭದ್ರತಾ ವಿಭಾಗ ಸೇರಿದಂತೆ ಆಯಾಕಟ್ಟಿನ ಹುದ್ದೆಗಳಲ್ಲಿರುವ ಪ್ರಮುಖರನ್ನು ವರ್ಗಾವಣೆ ಮಾಡುವ ಸಾಧ್ಯತೆಯಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಉಂಟಾಗಿದ್ದ ಕಾಲ್ತುಳಿತದ ಪ್ರಕರಣದಲ್ಲಿ ತಲೆದಂಡವಾಗಿದ್ದ ಬಿ.ದಯಾನಂದ ಅವರ ಸ್ಥಾನಕ್ಕೆ ಆಕಸಿಕವಾಗಿ ಮುಂಬಡ್ತಿ ಎನ್ನುವಂತೆ ಬೆಂಗಳೂರು ನಗರ ಆಯುಕ್ತರಾಗಿ ಆಯ್ಕೆಯಾಗಿದ್ದ



ಸೀಮಂತ್ ಕುಮಾರ್ ಸಿಂಗ್ ಅವರನ್ನು ವರ್ಗಾವಣೆ ಮಾಡುವ ಸಂಭವವೂ ಇದೆ. ಸಿಂಗ್ ಒಂದು ವೇಳೆ ಸೀಮಂತ್ ಕುಮಾರ್ ವರ್ಗಾವಣೆಯಾದರೆ ಅವರು ತೆರವಾಗಲಿರುವ ಈ ಸ್ಥಾನಕ್ಕೆ ಹಿರಿಯ ಪೊಲೀಸ್ ಅಧಿಕಾರಿ ಶರತ್‌ಚಂದ್ರ ಅವರು ನೇಮಕವಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಡಿ.ಕೆ.ಶಿವಕುಮಾರ್ ಜೊತೆ ಉತ್ತಮ ಸಂಬಂಧ ಇಟ್ಟುಕೊಂಡಿರುವುದು ಹಾಗೂ ಇಲಾಖೆಯಲ್ಲಿ ಯಾವುದೇ ರೀತಿಯ ವಿವಾದವನ್ನೂ ಮಾಡಿಕೊಳ್ಳದಿ ರುವುದು ಶರತ್‌ಚಂದ್ರ ಅವರಿಗೆ ಆಯುಕ್ತರ ಹುದ್ದೆ ಲಭಿಸುವ ಸಾಧ್ಯತೆ ಇದೆ. ಗೃಹ ಇಲಾಖೆಯಲ್ಲಿ ಅತ್ಯಂತ ಪ್ರಮುಖ ಹುದ್ದೆ ಎನಿಸಿದ ಗುಪ್ತಚರ ವಿಭಾಗದ ಮುಖ್ಯಸ್ಥರನ್ನು ಸಹ ವರ್ಗಾವಣೆ ಮಾಡುವ ಚಿಂತನೆ ಡಿ.ಕೆ.ಶಿವಕುಮಾರ್‌ರವರ ಮುಂದಿದೆ ಎನ್ನಲಾಗುತ್ತಿದೆ.

ಹಾಲಿ ಗುಪ್ತಚರ ವಿಭಾಗದ ಮುಖ್ಯಸ್ಥ ಲಾಬುರಾಮ್ ಅವರನ್ನು ವರ್ಗಾವಣೆ ಮಾಡಿ ಈ ಸ್ಥಾನಕ್ಕೆ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಹಿತೇಂದ್ರ ಅವರನ್ನು ನೇಮಕ ಮಾಡಲು ಒಲವು ತೋರಿದ್ದಾರೆ. ರಾಜ್ಯದ ಪ್ರತಿಯೊಂದು ಮಾಹಿತಿಗಳನ್ನು ಕಲೆ ಹಾಕಿ ಆಯಾ ದಿನದ ಬೆಳವಣಿಗೆಗಳನ್ನು ಮುಖ್ಯಮಂತ್ರಿಗಳಿಗೆ ನೀಡುವ ಹೊಣೆಗಾರಿಗೆ ಗುಪ್ತಚರ ವಿಭಾಗದ ಮುಖ್ಯಸ್ಥರಿಗೆ ಇರುತ್ತದೆ. ಸಾಮಾನ್ಯವಾಗಿ ಮುಖ್ಯಮಂತ್ರಿಗಳ ಜೊತೆ ಯಾರು ನಿಕಟ ಸಂಪರ್ಕ ಹೊಂದಿರುತ್ತಾರೋ ಅಂತವರನ್ನು ಮಾತ್ರ ಈ ಹುದ್ದೆಗೆ ನೇಮಕ ಮಾಡುವುದು ಒಂದು ರೀತಿಯ ಅಲಿಖಿತ ಸಂಪ್ರದಾಯವಾಗಿದೆ.


ಹಾಗೊಂದು ವೇಳೆ ಲಾಬುರಾಮ್ ಅವರನ್ನು ವರ್ಗಾವಣೆ ಮಾಡಿದರೆ ಹಿರಿಯ ಐಪಿಎಸ್ ಅಧಿಕಾರಿ ಹಿತೇಂದ್ರ ಅವರನ್ನು ಗುಪ್ತಚರ ವಿಭಾಗದ ಮುಖ್ಯಸ್ಥರಾಗುವುದು ಖಚಿತ ಎನ್ನಲಾಗುತ್ತಿದೆ. ಇದೇ ರೀತಿ ಆಂತರಿಕ ಭದ್ರತಾ ವಿಭಾಗ, ಸಿಐಡಿ, ಕೆಎಸ್‌ಆರ್‌ಪಿ, ಎಡಿಜಿಪಿ ಸೇರಿದಂತೆ ಹಲವು ವಿಭಾಗಗಳ ಮುಖ್ಯಸ್ಥರನ್ನು ವರ್ಗಾವಣೆ ಮಾಡಲಾಗುತ್ತದೆ ಎಂಬ ಮಾತು ಕೇಳಿಬರುತ್ತಿದೆ.

# ಲೇಖಕರ ದಿನಚರಿ...

## ಅಪ್ಪ ಎನ್ನುವ 'ಅಮರ' ಶಿಲ್ಪಿ

**ಮನೆಯ ಮೊದಲ ಪಾಠ ಶಾಲೆ... ತಾಯಿ ಮೊದಲ ಗುರು..... ಆದರೆ, ಅಪ್ಪ ಆ ಶಾಲೆಯ ಮುಖ್ಯೋಪಾಧ್ಯಾಯ....** ಒಂದು ಕುಟುಂಬದ ಮುಖ್ಯಸ್ಥನ್ನಾಗಿ ಆ ಕುಟುಂಬವನ್ನು ಜೋಪಾನ ಮಾಡುಲು ಪಾಲನೆ ಮಾಡುಲು ಅಪ್ಪ ಪಡುವ ಕಷ್ಟ ಅಷ್ಟಿಷ್ಟಲ್ಲ. ದಿನ ನಿತ್ಯದ ಹೊಟ್ಟೆಗೆ, ಬಟ್ಟೆಗೆ, ಮಕ್ಕಳ ಶಾಲೆಗೆ, ಅರೋಗ್ಯಕ್ಕೆ ಬೇಕಾದ ಖರ್ಚುನ್ನು ಭರಿಸಲು ದಿನಪ್ರತಿ ಪರದಾಡುತ್ತಾನೆ.... ಏನೇ ಕಷ್ಟ ಬಂದರು ಅದನ್ನ ನಮಗೆ ತೋರಿಸದೆ ತಾನೇ ನುಂಗಿ ನೀಲಕಂಠ ನಾಗುತ್ತಾನೆ.

ಅಪ್ಪ ನೀಡಿದ ಶಿಕ್ಷಣ,ತಿಳುವಳಿಕೆ, ಜ್ಞಾನ,ನಮ್ಮ ಜೀವನಕ್ಕೆ ಆದಾರ ಅನ್ನುವುದು ಸಾರ್ವಕಾಲಿಕ ಸತ್ಯ. ಅಪ್ಪ ನಮಗೆ ಹೇಳಿ ಕಲಿಸಿದ್ದು, ಹೊಡೆದು,ಬೈದು, ಬುದ್ದಿ ಹೇಳಿ ಕಳಿಸಿದ್ದು ಮಾತ್ರ ಕೊಡುಗೆ ಅಲ್ಲ ಅಪ್ಪನನ್ನು ನೋಡಿ, ಅನುಕರಣೆ ಮಾಡಿ, ಅವನ ಆದರ್ಶವನ್ನು ಬೆಳೆಸಿಕೊಂಡಿದ್ದು ಕೂಡ ಅಪ್ಪನ ಕೊಡುಗೆ. ಅದೇನೋ ಗೊತ್ತಿಲ್ಲ, ಜಗತ್ತಿನಲ್ಲಿ ಯಾರಿಗೂ ಜಗ್ಗದ, ಬಗ್ಗದ ಹಠಮಾರಿಗಳು ನಾವು. ಆದರೆ ಅಪ್ಪನ ಮುಂದೆ ನಮ್ಮ ಆಟ ಏನು ನಡೆಯೋಲ್ಲ. ಒಬ್ಬ ತಂದೆ ಮಕ್ಕಳಿಗೆ ಅಪ್ಪನಾಗಿ, ಗುರು ಆಗಿ, ಸ್ನೇಹಿತನಾಗಿ,ಅಷ್ಟೇ ಅಲ್ಲ ದೇವರಾಗಿ, ಜೀವನ ರೂಪಿಸುವ ಶಿಲ್ಪಿಯಾಗಿ ನಾನಾ ಪಾತ್ರ ವಹಿಸುತ್ತಾನೆ. ಅಪ್ಪನಿಗೆ ವಾಸ್ತವದಲ್ಲಿ ಎರಡು ಮುಖ. ಬಾಹ್ಯವಾಗಿ ಅಪ್ಪ ಮಕ್ಕಳಿಗೆ ಬೈದು, ಹೊಡೆದು, ಹೆದರಿಸಿ ಸರಿ ದಾರಿಗೆ ತರುವ ಒಂದು ಮುಖವಾದರೆ. ಆಂತರಿಕವಾಗಿ ಮಕ್ಕಳಿಗಾಗಿ ಎಲ್ಲವನ್ನು ತ್ಯಾಗ ಮಾಡುವ, ಮಕ್ಕಳಿಗೆ ನೋವಾದರೆ ತಾನು ವ್ಯಥೆ ಪಡುವ ಮತ್ತು ತಾನು ಹರಕು ಬಟ್ಟೆ,ಚಪ್ಪಲಿ ಹಾಕಿ ಮಕ್ಕಳಿಗೆ ಹೊಸ, ಹೊಸದನ್ನು ಕೊಡಿಸಿ ಮಕ್ಕಳು ಆನಂದ ಪಡುವುದನ್ನು ನೋಡುವ ಮುಖ ಇನ್ನೊಂದು. ನನ್ನ ಪ್ರಕಾರ ಅಪ್ಪ ಅನ್ನುವ ಶಕ್ತಿ ನಮ್ಮ ಪಾಲಿನ ವಿಶ್ವ ವಿದ್ಯಾಲಯ. ಇವತ್ತು ನಾವು



ಏನಾದರು ಆಗಿದ್ದೀವಿ ಅಂದ್ರೆ ಅದರಲ್ಲಿ ಅಪ್ಪನ ಕೊಡುಗೆ ಅಪಾರ. ನನ್ನ ಚಿಕ್ಕ ವಯಸಿನಲ್ಲಿ ನಡೆದ ಒಂದು ಪ್ರಸಂಗ ಇಂದು ನನಗೆ ಶಾಶ್ವತ ಮಾರ್ಗದರ್ಶನ ಆಗಿ ಉಳಿದದ್ದು ಅಪ್ಪನಿಂದ. 4 ನೇ ತರಗತಿಯಲ್ಲಿ ಓದುತ್ತಿದ್ದ ವೇಳೆ ಸ್ನೇಹಿತನೊಬ್ಬ ಆಗಾಗ ಪೆಪ್ಪರ್ ಮೆಂಟ್, ಸಿಹಿ ತಿನಿಸು ತೆಗೆದುಕೊಳ್ಳಲು ಬಲವಂತವಾಗಿ ನನಗೆ ಸಾಲವಾಗಿ ಕೊಟ್ಟಿದ್ದ ಹಣ 1 ರು ಆಗಿತ್ತು.ತಿರುಗಿ ಅವನಿಗೆ ಹಣ ದ ಸಮಸ್ಯೆ ಆಗಿ ಅವನು ತಾನು ಕೊಟ್ಟ ದುಡ್ಡು ವಾಪಾಸ್ ಕೇಳಲು ನಮ್ಮ ಮನೆಗೆ ಬಂದುಬಿಟ್ಟಿದ್ದ. ಅಂದು ನಾನು ಮನೆಯಲ್ಲಿ ಇದ್ದಿಲ್ಲವಾದರಿಂದ ಸಹಜವಾಗಿ ಈ ವಿಷಯ ಇದು ನನ್ನ ಅಪ್ಪನಿಗೆ ಗೊತ್ತಾಗಿತ್ತು. ನಾನು ಆಟವಾಡಿ ಮನೆಗೆ ಹೋದಾಗ ನಾನು ಬರುವುದನ್ನೇ ಕಾಯುತ್ತಿದ್ದ ಅಪ್ಪ ನನಗೆ ಬಿಸಿ ಬಿಸಿ ಕಜ್ಜಾಯ ನೀಡಿದ್ದ. ಅಷ್ಟೇ ಅಲ್ಲ ನೀನು ಯಾವತ್ತೂ ಸಾಲ ಮಾಡಬೇಡ ಅನ್ನುವ ಪಾಠ ಕಳಿಸಿದ್ದ. ಬಹುಷಃ, ಆ ಪಾಠ ನನ್ನ ಜೀವನದಲ್ಲಿ ಒಂದು ಮೌಲ್ಯ ತಂದು ಕೊಟ್ಟಿದೆ ಅಂದರೆ ತಪ್ಪೇನಿಲ್ಲ. ಹೀಗೆ ಪ್ರತಿಯೊಬ್ಬರ ಜೀವನದಲ್ಲಿಯೂ ಅಪ್ಪ ನಿಜವಾದ ಹೀರೋ ಆಗಿರುತ್ತಾನೆ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ನಾವೇ ಅಪ್ಪನ ಸ್ಥಾನದಲ್ಲಿ ಬಂದಿರುತ್ತೇವೆ. ಒಂದು ಸೋಜಿಗ ಅಂದ್ರೆ, ಅಂತಾರಾಷ್ಟ್ರೀಯ ಅಪ್ಪಂದಿರ ದಿನಾಚರಣೆ ಅಂತ ಮಕ್ಕಳು ಅಪ್ಪನ ಫೋಟೋ ಸ್ಟೇಟಸ್ ಇಟ್ಟು ಸಂಭ್ರಮಿಸುತ್ತಾರೆ. ಆದರೆ ನಮ್ಮ ಪ್ರತಿ ದಿನವನ್ನು ಹಸನಾಗಿ ಮಾಡಿದ ಅಪ್ಪನನ್ನು ಸಂಭ್ರಮಿಸಲು ಒಂದು ದಿನ ಸಾಕೆ..? ಎನ್ನುವುದು ನನ್ನ ಪ್ರಶ್ನೆ. ಕೊನೆಯದಾಗಿ ಎಲ್ಲಾ ಮಕ್ಕಳಿಗೂ ನನ್ನ ವಿನಂತಿ ಏನೆಂದರೆ, ಅಪ್ಪನನ್ನು ಗೌರವಿಸಿ. ಯಾಕಂದ್ರೆ ಜೀವನದಲ್ಲಿ ಎಷ್ಟೋ ಜನರಿಗೆ ಗೌರವ ನೀಡಲು ಅಪ್ಪನೇ ಇರುವುದಿಲ್ಲ. ಇದ್ದಾಗ ಅಪ್ಪನನ್ನು ಖುಷಿಯಾಗಿ ನೋಡಿಕೊಳ್ಳೋದು ಅಪ್ಪನಿಗೆ ನಾವು ಕೊಡುವ ನಿಜವಾದ ಗೌರವ. ನಿಮ್ಮ ಜೀವನದ ಅಮರ ಶಿಲ್ಪಿಗೆ ನೀವು ಏನು ಕೊಟ್ಟಿದ್ದೀರಿ ಅನ್ನೋದು ಮುಖ್ಯ ಅಲ್ಲ, ನೀವು ಕೊಟ್ಟಿದ್ದು ಆತನಿಗೆ ಎಷ್ಟು ಸಂತೋಷ ತಂದಿದೆ ಅನ್ನೋದು ಮುಖ್ಯ.

ಶಂಕರಗೌಡ ಪಾಟೀಲ್, ಗಿಣಿಗೇರ.

## ಡಿಸಿಶನ್ ಮೇಕಿಂಗ್

**ಜೀವನ ಅನ್ನೊದು ಒಂದು ತರ ನದಿ ಇದ್ದಂಗೆ. ಎಲ್ಲೊ ಹುಟ್ಟಿ ಎಲ್ಲೊ ಹರಿದು ಮತ್ತೆ ಎಲ್ಲೊ ಒಂದು ಕಡೆ ಹೋಗಿ ಸೇರೊದು. ಇದು ನಿಸರ್ಗದ ನಿಯಮ ಆದರೆ ಬದುಕು ಅನ್ನೊದು ಕೆಲವೊಮ್ಮೆ ನಮ್ಮದೇ ಆದ ತಪ್ಪಾದ ಆಯ್ಕೆಗಳಿಂದ ಸರಿಯಾದ ದಾರಿ ಕಾಣದ ಹೇಗೆಗೊ ಬದಲಾವಣೆಗೊಂಡು ಊಹೆನೆ ಮಾಡೊಕೆ ಆಗದೆ ಇರೋ ಪರಿಸ್ಥಿತಿಲಿ ಸಿಕ್ಕಿಹಾಕೊಂಡು ಬಿಡತಿವಿ.**



ಮೊದ ಮೊದಲು ನಮಗೆ ಯಾವುದು ಅರ್ಥ ಹಾಗೊಲ್ಲ, ಅರ್ಥ ಹಾಗೊಲ್ಲ ಅನ್ನೊಕಿಂತ ನಮ್ಮ ಜೀವನದಲ್ಲಿ ಏನಾಗತಿದೆ. ಅಂತನೇ ಗೊತ್ತಾಗೊಲ್ಲ ಸರಿ ತಪ್ಪಿನ ಅರಿವು ಆಗೋವಷ್ಟರಲ್ಲಿ ಜೀವನ ತುಂಬಾ ಮುಂದಕ್ಕೆ ನಡೆದು ಹೋಗಿರುತ್ತೆ .ಇದು ನಾವೇ ತೆಗೆದುಕೊಂಡ ನಿರ್ಧಾರಗಳ ಫಲವಾಗಿರುತ್ತೆ ನಾವು ಇಂಗೆ ಬದುಕು ಕಟ್ಟಿಕೊಳ್ಳಬೇಕು. ಅನ್ನೊರು ಕನಸು ತುಂಬಾ ವಿಚಿತ್ರ ರೀತಿಲಿ ನಡೆದೊಗಿ ಬಿಡುತ್ತೆ ,ಆದರೆ ಏನನ್ನೂ ಊಹಿಸದೆ ಹೇಗೋ ಜೀವನ ನಡಿಲಿ ಅನ್ನೊರು ಚನ್ನಾಗೆ ಇರತಾರೆ.

ಆದರೆ ನಾನು ಎಲ್ಲವನ್ನು ನಿಭಾಹಿಸಬಲ್ಲೆ ಅನ್ನೊ ಮೊಂಡುತನದ ನಿರ್ಧಾರಗಳೇ ನಮ್ಮನ್ನ ತುಂಬಾ ಕೆಳಮಟ್ಟದಲ್ಲಿ ಜೀವಿಸೋ ಹಾಗೆ ಮಾಡಿಬಿಡುತ್ತೆ. ಇಂತಹ ಸಮಸ್ಯೆಗಳಲ್ಲಿ ಸಿಕ್ಕಿ ಹಾಕಿಕೊಳ್ಳೊರು ಬಹುಷ ಎಲ್ಲವನ್ನು ಗೆದ್ದೆ ಗೆಲ್ಲತಿನಿ ಅಂತ ಅಂದುಕೊಂಡೊರು ಇದಕೆ ಕಾರಣಗಳು ತುಂಬಾ ಇರಬಹುದು .ಇಂತಹ ವ್ಯಕ್ತಿಗಳು ತುಂಬಾ ಭಾವನಾತ್ಮಕವಾಗಿ ಇರೊರು ಮತ್ತೆ ಜೀವನದಲ್ಲಿ ಏಕಾಂಗಿತನದಲ್ಲಿ ಇದ್ದು ತಮ್ಮ ಕನಸುಗಳನ್ನ ತುಂಬಾ ಮೆಲ್ಮಟ್ಟದಲ್ಲಿ ಕಂಡುಕೊಂಡರು,

ಇರರೊಟ್ಟಿ ತುಂಬಾ ಕಮ್ಮಿ ಮಾತಾಡೋರು, ಮತ್ತು ಜೀವನನಾ ತುಂಬಾ ಸ್ಟ್ರಗಲ್ ಮಾಡತಾ ಬೆಳದೊರು ಇವರೊಂತರ ದೇವರಿಗೆ ತುಂಬಾ ಪ್ರೀತಿ ಪಾತ್ರರಾದೊರ ತರ ಇರತಾರೆ. ಯಾಕಂದ್ರೆ ಬೇರೆಯವರ ಕಷ್ಟಕ್ಕೆ ಟಕ್ ಅಂತ ಸ್ಪಂದಿಸೋರು ಮತ್ತೆ ಬೇರೆಯವರಿಗೆ ಯಾವತ್ತು ಬೇಜಾರ ಮಾಡೋಕೆ ಬಯಸದೇ ,ಇರೋರು ಆದರೆ ತಮ್ಮದೇ ಜೀವನನಾ ಅರ್ಥಪೂರ್ಣವಾಗಿ ಕಟ್ಟಿಕೊಳ್ಳವಲ್ಲಿ ಎಡವಿರತಾರೆ .ಇದು ಅವರ ತಪ್ಪೋ ಅಥವಾ ವಿಧಿಯ ಆಟನೋ, ಅಥವಾ ಸಮಯದ ಸಂಭ್ರಮನೊ ,ಗೊತ್ತಿಲ್ಲ ಆದರೆ ಇಂತ ವ್ಯಕ್ತಿಗಳು ಡಿಸಿಶನ್ ತಗೊಂಡು ಜೀವನ ಮಾಡೊದರಲ್ಲಿ ಫೇಲಾದವರು ಅಂದರೆ ತಪ್ಪಾಗಲಾರದು. ಅದಕೆ ತುಂಬಾ ಜಾಣತನ ಇದೆ.

ಅನ್ನೊರು 100 ಸಲ ಯೋಚನೆ ಮಾಡಿದರು ಕೂಡಾ ಇನ್ನೊಂದಿಷ್ಟು ಸಲ ಯೋಚನೆ ಮಾಡಿ ನಿರ್ಧಾರ ತಗೊಳೊದು ತಪ್ಪೆನಿಲ್ಲ ,ಅದಕೆ ಯಾರೇ ಆಗಲಿ ಕೆಲವೊಮ್ಮೆ ಹಿರಿಯರ ಮಾತುಗಳನ್ನ ಕಡೆಗಣಿಸದೆ ಯಾವ ದೊಡ್ಡ ನಿರ್ಧಾರಗಳನ್ನ ತಗೊಳೊಕೆ ಹೋಗಬೇಡಿ. ಇಲ್ಲ ನೀವೆ ನಿರ್ಧಾರಗಳನ್ನ ತಗೊಳತಿದಿರಾ ಅಂದರೆ ನಿಮ್ಮ ಡಿಸೀಶನ್ ಮೆಕಿಂಗ್ ಎಲ್ಲವನ್ನು ಸರಿ ದೂಗಿಸುವಂತೆ ಇರಲಿ. ಕೊನೆ ಪಕ್ಷ ನೀವು ನೀವಾಗೆ ಉಳಿದುಕೊಳ್ಳವ ಹಾಗೆ ಇರಲಿ, ನಾವು ಬದುಕಿದ್ದಿವೊ, ಅಥವಾ ಇದು ನಮ್ಮ ಭ್ರಮೆನೂ ಅನ್ನೊ ಹಾಗೆ ಆಗದೆ ಇರಲಿ .... ಮುಂದುವೆರೆಯುವುದು.



ರಜಿಯಾ ಕೆ ಭಾವಿಕಟ್ಟಿ

## ನಿನ್ನ ನೀ ಮರೆಯದಿರು

### ನಮಗೆ ನಾವೇ ಬೋರಾಗುವುದರಿಂದ ದೂರ ಇರೋಣ...

ಯಾಕೋ ತುಂಬಾ ಬೇಜಾರಾಗ್ತಿದೆ, ಬೋರಾಗ್ತಿದೆ, ಸಖತ್ ಲೋನ್ಲಿನೆಸ್ ಕಾಡ್ತಿದೆ, ಟೈಮ್ ಸಾಗ್ತಾನೆ ಇಲ್ಲಾ ಅಂತ ಅವಾಗವಾಗ ಅನ್ಸುತ್ತೆ ಅಲ್ವಾ? ತುಂಬಾ ಖಾಲಿ ಕೂತಿದೀವಿ ಅನ್ನೋ ಆಗಾಗುತ್ತೆ.. ಅರೆ ನಮಗೆ ನಾವೇ ಬೋರ್ ಆದ್ರೆ, ಇನ್ನೂ ಹೊರಗಿನ ಪ್ರಪಂಚಕ್ಕೆ ನಾವ್ಯಾವ ಲೆಕ್ಕವೂ ಅಲ್ಲ.. ನಮ್ಗೆ ಮಾಡೋಕೆ ಒಂದು ಕೆಲ್ಸ ಅಂತನೂ ಇರುತ್ತೆ. ಹಾಗೇ ಒಂದಷ್ಟು ಸೆಲೆಬ್ರೇಶನ್, ಬಗೆಹರಿಯದ ಪ್ರಾಬ್ಲಂಸ್ ಇರುತ್ತೆ. ಅದರ ಮಧ್ಯೆಯೂ ಒಮ್ಮೊಮ್ಮೆ ಬೋರ್ ಆಗುತ್ತಲ ಅದು ಇಂಟರೆಸ್ಟಿಂಗ್.. ಅದನ್ನ ಆಚೆಗೆ ಕಳ್ಸಿ ಬಿಡೋಣ.

ನಾವು ತುಂಬಾ ಕಾಂಫಿಡೆಂಟ್ ಆಗಿರೋಣ.. ಫ್ರೀ ಇದ್ದಾಗ ನಮ್ಮ ವೃತ್ತಿಯ ಹೊರತಾದ ಪ್ರವೃತ್ತಿಯಲ್ಲಿ ತುಸು ಹೆಚ್ಚೇ ಬ್ಯುಸಿಯಾಗಿರೋಣ.. ಬೋರ್ ಅಂತಾ ಗೊತ್ತಾಗ್ತಾ ಇದ್ದಾಗೆ ನಮ್ಮ ಮನಸಿಗೆ ಹಿತವೆನಿಸೋ ಒಂದೊಳ್ಳೆ ಟೀ ನಾದ್ರು ಸಿಪ್ ಮಾಡ್ತಾ ನಿಮ್ಮ ಜೊತೆ ಜೊತೆ ನೀವೇ ಸ್ವಲ್ಪ ಮಾತಾಡಿ ಅದ್ರ ಖುಷಿನೆ ಬೇರೆ.. ಔಜಿಭಿಠಣಢಿಜ ನಮಗೆ ಜೀವಕ್ಕೆ ಜೀವ ಕೊಡೋ ಫ್ರೆಂಡ್ಸ್, ಫ್ರೆಂಡ್ಸ್ ತರ ಇರೋ ಲೈಫ್ ಪಾರ್ಟ್ನರ್, ಫ್ರೆಂಡೆ ಆಗಿರೋ ಪೇರೆಂಟ್ಸ್, ಕಸಿನ್ಸ್, ಕಲಿಗ್ಸ್ ಎಲ್ಲರೂ ಇದ್ರು ನಮಗೆ ನಾವೇ ಬೆಸ್ಟ್ ಫ್ರೆಂಡ್ ಕಣ್ರೀ.. ನಾವು ನಮ್ಮ ನಮ್ಮೊಳಗೆ ಮಾತಾಡಿಕೊಂಡಷ್ಟು, ಚಿಂತನೆ ಮಾಡಿದಷ್ಟು ಯಾರೊಂದಿಗೂ ಮುಕ್ತವಾಗಿರಲ್ಲಾ..

ಉದಾಹರಣೆಗೆ ಈಗ ನಾವು ಯಾವ್ದಾದ್ರೂ ವಿಷಯದ ಬಗ್ಗೆ ಕನ್ಫ್ಯೂಸ್ ಆಗಿದಿರ ಅದರ ಬಗ್ಗೆ ಚರ್ಚೆ ಮಾಡ್ತೀವಿ, ಎಲ್ಲರು ಒಂದೊಂದು ಅಭಿಪ್ರಾಯ ಹೇಳ್ತಾರೆ ಆದ್ರೆ ಕೊನೆಗೊಂದು ನಿರ್ಧಾರ ನಿಮ್ಮದೇ ಅಲ್ವಾ.. ಅದೆ ರೀತಿ ನಿಮ್ಮ ಸಂಕಟಗಳಿಗೆ ಸಾಂತ್ವನ ಯಾರೇ ಹೇಳಿದ್ರು ಕೊನೆಗೆ ಸಮಾಧಾನ ಆಗೋದು ನೀವು ಮನಸು ಮಾಡಿದಾಗ ಮಾತ್ರ ಅಲ್ವಾ? ಎಲ್ಲರ ಜೊತೆಗೆ ಕಳೆಯೋ ಸುಂದರ ಕ್ಷಣಗಳು ಎಲ್ಲವೂ ಒಂದೊಂದು ತರದ ಅನುಭವಗಳು, ಒಂದಷ್ಟು ಸವಿನೆನಪುಗಳು, ಸಂಬಂಧ, ಬಾಂಧವ್ಯಗಳ, ದುಡಿಮೆ ಹೀಗೆ ಜೀವನ ಬಂಡಿಯಲ್ಲಿ ಸಾಗೋ ದಾರೀಲಿ ಯಾವತಾದ್ರು ನಮಗೆ ನಾವು



ಬೋರಾದ್ರೆ ಅದನ್ನ ತಕ್ಷಣ ಖಂಡಿಸಿ..

ನಿಮ್ಗೆ ಇಂಟರೆಸ್ಟ್ ಇರೋ ವಿಷಯಗಳಲಿ ತೊಡಗಿಸಿ, ಖಂಡಿತ ಎಲ್ಲರಲ್ಲೂ ಒಂದೊಂದು ಪ್ರತಿಭೆ ಇರುತ್ತೆ, ನೃತ್ಯ, ಸಂಗೀತ, ಸಾಹಿತ್ಯ, ಓದು, ಅಡುಗೆ, ರಂಗೋಲಿ, ಕ್ರೀಡೆ, ಡ್ರೈವಿಂಗ್, ಸ್ಕೇಟಿಂಗ್ ಹೀಗೆ ಹಲವಾರು ಆಪ್ಷನ್ಸ್ ಇದಾವೆ.. ನಮ್ಮ ಆಲೋಚನೆಗಳೇ ನಾವಗೀರ್ತೀವಿ.ನಮ್ಮ ಅಭಿರುಚಿಗಳು ನಮ್ಮ ವ್ಯಕ್ತಿತ್ವ ರೂಪಿಸುತ್ತೆ.. ಕನ್ನಡಿ ಮುಂದೆ ನಿಂತು ನಮಗೆ ನಾವೇ ಸ್ಟ್ರಾಂಗ್ ಅಂತೇಳಿಕೊಳ್ಳೋಣ. ನಾವು ಹೇಗಿದ್ದೇವೋ ಹಾಗೇ ಒಪ್ಕೋಳೋಣ.. ದಪ್ಪ,ಸಣ್ಣ, ಕುಳ್ಳಗೆ,ಬೆಳ್ಳಗೆ, ರಿಚ್, ಪೂರ್ ಇಂತಹ ಕಂಪ್ಯಾರಿಸನ್ ಯಿಂದ ಹೊರಗೆ ಬಂದು ಅಯೋ ಏನು ಕೆಲ್ಸ ಇಲ್ಲ, ಟೈಮ್ ಹೋಗ್ತಾ ಇಲ್ಲ ಅಂತಾ ಸುಮ್ಮನೆ ಬೇಡದ ರೀಲ್ಸ್, ನ್ಯೂಸ್, ಗಾಸಿಪ್ ಗಳಿಂದ ದೂರ ಬಂದು, ಸುತ್ತಲೂ ಇರೋ ಒಳ್ಳೊಳ್ಳೆ ವಿಷಯಗಳಲ್ಲಿ ತೊಡಗಿಸಿಕೊಳ್ಳೋಣ.. ಈಗಂತೂ ಆನ್ಲೈನ್ ಅಲ್ಲಿ ನಮ್ಮ ಆಸಕ್ತಿಯನುಸಾರ ಹೊಸತೇನಾದೂರು ಕಲಿತಿವಿ ಅಂದ್ರೆ ಒಳ್ಳೆಯ ಅವಕಾಶಗಳಿವೆ.. ಆದರೆ ಒಳ್ಳೆಯ ಆಯ್ಕೆ ನಮ್ಮದಾಗಿರಬೇಕು ಅಷ್ಟೇ.. ಬೋರ್ ಆದಾಗೆಲ್ಲಾ ಅದನ್ನ ಆಚೆಗಿಟ್ಟು ನಮಗೆ ನಾವೇ ಒಳ್ಳೆ ಫ್ರೆಂಡ್ ಆಗಿರೋಣಾ... ನಮಗೆ ನಾವೇ ಬೋರಾಗುವುದರಿಂದ ದೂರ ಇರೋಣ

ಶೃತಿ ಸಿರಿ ಶಿವಮೊಗ್ಗ

## ಮರೆಯಲಾಗದ ಕಾರ್ಮಿಕರು..!



ವರ್ಷಗಳುರುಳಿ ವರ್ಷಗಳು ಬರುತ್ತಲೇ ಇದೆ ಮತ್ತೆ ಮೇ 1 ಕಾರ್ಮಿಕರ ದಿನ ಬಂದಿದೆ .ತಮ್ಮ ಶ್ರಮ ಯೋಗ ಅನುದಾನದಿಂದ ನಮ್ಮೆಲ್ಲರ ಬದುಕು ಹಸನುಗೊಳಿಸುವ, ಸಹನೀಯ ಮಾಡಿಸುವ ಎಲ್ಲಾ ಕಾರ್ಮಿಕ ಬಂಧುಗಳಿಗೂ ಕೃತಜ್ಞತಾಪೂರ್ವಕ ವಂದನೆಗಳು ಅಭಿನಂದನೆಗಳು


ಆಗ ಎಪ್ಪತ್ತರ ದಶಕ .ಮನೆಯ ಶೌಚಾಲಯಗಳನ್ನು ತೊಳೆಯಲು ಬೇರೆಯೇ ಕರ್ಮಚಾರಿಗಳು ಬರುತ್ತಿದ್ದರು.

ಆಗೆಲ್ಲ ಶೌಚಾಲಯಗಳು ಅಂಗಳದಲ್ಲಿ ಹೊರಗಡೆ ಇರುತ್ತಿದ್ದವು .ವಿಶ್ವೇಶ್ವರನಗರದ ನಮ್ಮ ಆ ಮನೆಯಲ್ಲಿ ಈ ಕೆಲಸಕ್ಕೆ ಬರುತ್ತಿದ್ದವಳು ನಾಗಿ.

ಕಪ್ಪು ಬಣ್ಣದವಳಾದರೂ ಲಕ್ಷಣವಾಗಿದ್ದ ಆಕೆ ಏಕೋ ನನ್ನ ಮನಸ್ಸಿನಲ್ಲಿ ಅಚ್ಚಳಿಯದ ನೆನಪಾಗಿದ್ದಾಳೆ .ಕಾಫಿಯ ಹುಚ್ಚಿದ್ದ ಅವಳು ಒಂದು ರೂಪಾಯಿ ಕಡಿಮೆ ಬೇಕಾದರೂ ಕೊಡಿ ದಿನ ಕಾಫಿ ಮಾತ್ರ ಕೊಟ್ಬುಡಿ ಎನ್ನುತ್ತಿದ್ದುದು ,ಬಂದ ಕನ್ನಡ ಸಿನಿಮಾಗಳನ್ನು ಬಿಡದೆ ನೋಡುತ್ತಿದ್ದ ಅವಳ ಉತ್ಸಾಹ ಮತ್ತು ಆ ನಾಯಕಿಯ ಕಷ್ಟದ ಮುಂದೆ ತನ್ನದು ಏನೂ ಇಲ್ಲ ಎಂದು ಸಮಾಧಾನಿಸಿ ಕೊಳ್ಳುತ್ತಿದ್ದುದು. ಎಲ್ಲಕ್ಕಿಂತ ಹೆಚ್ಚು ಎನ್ನಿಸುವುದು ಕಥೆಯೆಂದರೆ ಅವಳಿಗಿದ್ದ ಪ್ರೀತಿ. ಅವಳೇ ಹೇಳಿದಂತೆ ಚಾಮರಾಜನಗರದ ಕಡೆಯವಳಾದ ಅವಳು ವಯಸ್ಸಾದ ಗಂಡನ್ನು ಮದುವೆಯಾಗಲು ಒಪ್ಪದೆ ಪ್ರೀತಿಸಿದ ಈ ಹುಡುಗನ ಜೊತೆ ಓಡಿ ಬಂದಿದ್ದಂತೆ.

ರಾತ್ರಿಯೆಲ್ಲಾ ಕುಡಿದು ಗಲಾಟೆ ಮಾಡಿ ಹೊಡೆದು ಬಡಿದರೂ "ಬಿಡಿಯಮ್ಮಾ ಇದೆಲ್ಲಾ ನಮ್ಮಲ್ಲಿ ಇದ್ದದ್ದೇ. ಕುಡಿಯದಿದ್ದಾಗ ಅವನು ತುಂಬಾ ಒಳ್ಳೆಯವನು" ಎಂದು ಗಂಡನನ್ನು ವಹಿಸಿ ಕೊಳ್ಳುತ್ತಿದ್ದಳು ."ಚಿಕ್ಕಮ್ಮರೇ ನಾಳೆ ಸಿನಿಮಾಗೆ ಹೋಗ್ಬೇಕು ನನಗೊಂದಿಷ್ಟು ಹೂವು ಕೊಡಿ ಆಯ್ತಾ "ಅಂತ ನಮ್ಮ ಮನೆಯಲ್ಲಿ ಬಿಟ್ಟಿದ್ದ ಯಾವುದೇ ಹೂವನ್ನ ಆಗಲಿ ಕೇಳಿ ತೆಗೆದುಕೊಂಡು ಹೋಗುತ್ತಿದ್ದಳು. ಅವಳ ವ್ಯಕ್ತಿತ್ವ ಎಷ್ಟು ವಿಶಿಷ್ಟ ಎಂದು ಈಗ ಅರ್ಥವಾಗುತ್ತಿದೆ ..ಅತ್ತು ಕರೆದು ಮಗನನ್ನು ಶಾಲೆಗೆ ಕಳುಹಿಸಿ ಎಸ್ಸೆಸ್ಸೆಲ್ಸಿ ಪಾಸಾಗುವಂತೆ ಮಾಡಿ ಸರಕಾರಿ ನೌಕರರಿಗೆ ಸೇರಿಸಿದ ಹೆಗ್ಗಳಿಕೆ ಅವಳದು.ಮನೆಯವರ ವಿರೋಧದ ಮಧ್ಯೆಯೂ ಎರಡೇ ಮಕ್ಕಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಳು.

ತಾನು ಎಷ್ಟೇ ಆರ್ಥಿಕ ಕಷ್ಟದಲ್ಲಿದ್ದರೂ ತನಗಿಂತ ಕಷ್ಟದಲ್ಲಿರುವವರಿಗೆ ಕೈಲಾದಷ್ಟು ಕೊಡುತ್ತಿದ್ದಳು "ಬಡವರಿಗೆ ಬಡವರೇ ತಾನೇ ಆಗಬೇಕು" ಅನ್ನೋದು ಅವಳ ಡೈಲಾಗು. ಎಷ್ಟೇ ಕಷ್ಟವಿದ್ದರೂ ಮಕ್ಕಳ ಏಳಿಗೆಗೆ ದುಡಿಯುವ ತಾಯಿ ,ಪ್ರೀತಿಯಿಂದ ಗಂಡನನ್ನು ವಹಿಸಿಟ್ಟುಕೊಳ್ಳುವ ಪ್ರೇಮಮಯಿ' ಅದಮ್ಯ ಜೀವನೋತ್ಸಾಹದ ಕಾರಂಜಿ ಎಂದೆಲ್ಲಾ ಈಗ ಅನ್ನಿಸುತ್ತದೆ. ಆಗ ಅವಳಂತಿನ ಇತರರಿಗಿಂತ ಅವಳು ವಿಭಿನ್ನ ಎಂದು ಮಾತ್ರ ಅನ್ನಿಸಿತ್ತು .ಬೇಕು ಬೇಕುಗಳ ಹಪಾಹಪಿಯಲ್ಲಿರುವ ಇಂದಿನವರ ಮಧ್ಯೆ ಅವಳು ವಿಶಿಷ್ಟ ಎಂದು ನಿಮಗೂ ಅನ್ನಿಸುವುದಿಲ್ಲವೇ ಹೇಳಿ ?ಸ್ವಲ್ಪ ಮಾತ್ರ ಕಷ್ಟವನ್ನೂ ಗುಡ್ಡವನ್ನಾಗಿಸಿ ಕೊರಗಿ ಬಿಪಿ ಶುಗರ್ ಬರಿಸಿಕೊಳ್ಳುವ ನಮ್ಮ ಇಂದಿನ ಜನಾಂಗಕ್ಕೆ ಎಷ್ಟೇ ಕಷ್ಟವಿದ್ದರೂ ನಗುನಗುತ್ತಾ ಜೀವನದ ಸಣ್ಣ ಸಣ್ಣ ವಿಷಯಗಳಲ್ಲೂ ಖುಷಿ ಕಾಣುತ್ತಾ ನೋವನ್ನು ಮರೆಯುತ್ತಿದ್ದ ಇಂತಹವರು ಉದಾಹರಣೆ. ಒಳ್ಳೆಯದು ಯಾರಲ್ಲೇ ಇರಲಿ ಗೌರವಿಸಿ ಅನುಕರಿಸುವುದು ನಮ್ಮ ಅಭ್ಯಾಸ ಆಗಬೇಕು ತಾನೆ..!?



ಸುಜಾತಾ ರವೀಶ್ ಮೈಸೂರು.

# ‘ಶಿಕ್ಷಕರ ಹೃದಯ ಗೆದ್ದವರು ಶಂಭಣ್ಣ’

## ಸೇವೆ, ಹೋರಾಟ, ಸರಳತೆ ಮತ್ತು

### ಮಾನವೀಯತೆಯ ಪ್ರತೀಕವಾಗಿ ಬೆಳೆದ ಅಪರೂಪದ ನಾಯಕ









## ಒಂದು ಹೆಸರು... ಒಂದು ನಂಬಿಕೆ...

ಇಂದು ಕರ್ನಾಟಕದ ಸಾವಿರಾರು ಶಿಕ್ಷಕರು ಮತ್ತು ಸರ್ಕಾರಿ ನೌಕರರ ಮನಸ್ಸಿನಲ್ಲಿ “ಶಂಭಣ್ಣ” ಎಂಬ ಹೆಸರು ಕೇವಲ ವ್ಯಕ್ತಿಯ ಹೆಸರಲ್ಲ. ಅದು ಶಿಕ್ಷಕರ ಅಣ್ಣ, ನೌಕರರ ಧ್ವನಿ, ಹೋರಾಟದ ನಾಯಕ, ಸರಳತೆಯ ಪ್ರತೀಕ, ಮಾನವೀಯತೆಯ ರೂಪ. ತಮ್ಮ ಸಾರ್ಥಕ ಸೇವಾ ಜೀವನದ ಮೂಲಕ ಶ್ರೀ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರು ಸಮಾಜಕ್ಕೆ ನೀಡಿರುವ ಸಂದೇಶ ಒಂದೇ “ಜನರಿಗಾಗಿ ಬದುಕಿದ ಜೀವನವೇ ಸಾರ್ಥಕ ಜೀವನ.” ಅವರ ಸೇವೆ, ಹೋರಾಟ, ಸರಳತೆ ಮತ್ತು ಮಾನವೀಯತೆ ಮುಂದಿನ ಪೀಳಿಗೆಗೆ ಸದಾ ಸ್ಫೂರ್ತಿಯಾಗಿರಲಿ. ನಿವೃತ್ತಿ ಜೀವನವು ಆರೋಗ್ಯಪೂರ್ಣ, ಸಂತೋಷಮಯ ಹಾಗೂ ಸಮಾಜಸೇವೆಯಿಂದ ಕೂಡಿರಲಿ ಎಂಬುದು ಶಿಕ್ಷಕರು, ನೌಕರರು ಹಾಗೂ ಅಭಿಮಾನಿಗಳ ಹೃತ್ಪೂರ್ವಕ ಹಾರೈಕೆಯಾಗಿದೆ.



**ಕೊಪ್ಪಳ: ಕರ್ನಾಟಕದ ಶಿಕ್ಷಕರು ಮತ್ತು ಸರ್ಕಾರಿ ನೌಕರರ ಲೋಕದಲ್ಲಿ ಕೆಲವು ಹೆಸರುಗಳು ಕೇವಲ ವ್ಯಕ್ತಿಗಳಾಗಿ ಉಳಿಯುವುದಿಲ್ಲ; ಅವು ಒಂದು ವಿಶ್ವಾಸ, ಒಂದು ಭರವಸೆ, ಒಂದು ಹೋರಾಟದ ಸಂಕೇತವಾಗಿ ಜನಮನದಲ್ಲಿ ಅಚ್ಚೊತ್ತಿಕೊಂಡಿರುತ್ತವೆ. ಅಂತಹ ಅಪರೂಪದ ವ್ಯಕ್ತಿತ್ವಗಳಲ್ಲಿ ಪ್ರಮುಖರು ಶಿಕ್ಷಕರು ಮತ್ತು ನೌಕರರ ಪ್ರೀತಿಯ “ಶಂಭಣ್ಣ” ಎಂದೇ ರಾಜ್ಯಾದ್ಯಂತ ಪರಿಚಿತರಾಗಿರುವ ಶ್ರೀ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರು.**

ಒಬ್ಬ ಸಾಮಾನ್ಯ ಶಿಕ್ಷಕರಾಗಿ ಸೇವಾ ಜೀವನ ಆರಂಭಿಸಿ, ಸಾವಿರಾರು ಶಿಕ್ಷಕರು ಮತ್ತು ನೌಕರರ ಆಶಾಕಿರಣವಾಗಿ, ಹಕ್ಕುಗಳ ಹೋರಾಟದ ಧ್ವನಿಯಾಗಿ, ಸಂಘಟನೆಯ ಶಕ್ತಿಯಾಗಿ ಮತ್ತು ಮಾನವೀಯತೆಯ ಪ್ರತಿ-ರೂಪವಾಗಿ ಬೆಳೆದಿರುವ ಅವರ ಜೀವನ ಪಯಣವು ಇಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದೆ. ಸರ್ಕಾರಿ ಸೇವೆಯಿಂದ ಅವರು ನಿವೃತ್ತಿಯಾಗುತ್ತಿರುವ ಈ ಸಂದರ್ಭದಲ್ಲಿ, ಅವರ ನಾಲ್ಕು ದಶಕಗಳ ಸೇವಾ ಬದುಕು, ಸಂಘಟನಾ ನಾಯಕತ್ವ ಮತ್ತು ಸಮಾಜಮುಖಿ ಚಿಂತನೆಗಳು ಮತ್ತೊಮ್ಮೆ ಸ್ಮರಣೀಯವಾಗುತ್ತಿವೆ.



**✦ ಸರಳ ಕುಟುಂಬದಿಂದ ಸಮಾಜಮುಖಿ ನಾಯಕತ್ವ:** ಕೊಪ್ಪಳ ತಾಲೂಕಿನ ಕೂಗಳತೆ ದೂರದಲ್ಲಿನ ಹಲಗೇರಿ ಗ್ರಾಮದ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಶ್ರೀ ಶಂಭುಲಿಂಗನಗೌಡ ಪಾಟೀಲ್ ಅವರು ಬಾಲ್ಯದಿಂದಲೇ ಶಿಸ್ತು, ಪರಿಶ್ರಮ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಕಾಳಜಿಯನ್ನು ತಮ್ಮ ಬದುಕಿನ ಮೌಲ್ಯಗಳಾಗಿ ಅಳವಡಿಸಿಕೊಂಡಿದ್ದರು. ಶಿಕ್ಷಣದ ಜೊತೆಗೆ ಸಮಾಜದ ಸಮಸ್ಯೆಗಳ ಬಗ್ಗೆ ಆಸಕ್ತಿ ಹೊಂದಿದ್ದ ಅವರು, ಮುಂದೆ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪವಿತ್ರ ಕಾರ್ಯದಲ್ಲಿ ತೊಡಗಿಸಿಕೊಂಡರು. ಅವರು ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅವರು ಕೇವಲ ಪಾಠ ಬೋಧನೆಗೆ ಸೀಮಿತವಾಗಲಿಲ್ಲ, ಶಾಲೆಯ ಅಭಿವೃದ್ಧಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಗ್ರಾಮೀಣ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ವಿಶೇಷ ಒತ್ತು ನೀಡಿದರು. ತಮ್ಮ ಸರಳತೆ, ಕರ್ತವ್ಯನಿಷ್ಠ ಮತ್ತು ವಿದ್ಯಾರ್ಥಿ ಸ್ನೇಹಿ ಮನೋಭಾವದಿಂದ ಅಚ್ಚುಮೆಚ್ಚಿನ ಶಿಕ್ಷಕರಾಗಿ ಗುರುತಿಸಿಕೊಂಡರು. ನಂತರ ಹಿರಿಯ ಮುಖ್ಯೋಪಾಧ್ಯಾಯರಾಗಿ ಬಡ್ತಿ ಪಡೆದು ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದರು. ಆದ-’ರೆ ಅವರ ವ್ಯಕ್ತಿತ್ವದ ಮತ್ತೊಂದು ಮುಖ ಶಿಕ್ಷಕರು ಮತ್ತು ನೌಕರರ ಹಕ್ಕುಗಳಿಗಾಗಿ ಹೋರಾಡಿದ ಸಂಘಟನಾ ನಾಯಕರದ್ದು.



**✦ ಸಂಘಟನೆಯ ಬೆನ್ನೆಲುಬಾದ ನಾಯಕ:** ಶಂಭಣ್ಣ ಅವರು ಶಿಕ್ಷಕರು ಮತ್ತು ಸರ್ಕಾರಿ ನೌಕರರ ಸಮಸ್ಯೆಗಳನ್ನು ಕೇವಲ ವೈಯಕ್ತಿಕ ವಿಚಾರಗಳೆಂದು ಪರಿಗಣಿಸಲಿಲ್ಲ. ಅವು ವ್ಯವಸ್ಥೆಯ ಸಮಸ್ಯೆಗಳು, ಅವುಗಳಿಗೆ ಸಮಗ್ರ ಪರಿಹಾರ ಅಗತ್ಯ ಎಂಬ ನಿಲುವು ಅವರದ್ದಾಗಿ-ತ್ತು. ಈ ಚಿಂತನೆಯೇ ಅವರನ್ನು ಸಂಘಟನಾ ಚಟುವಟಿ-ಕೆಗಳತ್ತ ಕರೆದೊಯ್ದಿತು. ತಮ್ಮ ದಕ್ಷ ನಾಯಕತ್ವ, ಹೋರಾಟದ ಮನೋಭಾವ ಮತ್ತು ನೌಕರರ ಮೇಲಿನ ಕಾಳಜಿಯಿಂದ ಅವರು ಕೊಪ್ಪಳ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸತತ ಮೂರು ಬಾರಿ ಆಯ್ಕೆಯಾಗುವ ಗೌರವ ಪಡೆದರು. ನಂತರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರಾಗಿ ರಾಜ್ಯ ಮಟ್ಟದಲ್ಲಿ ಕಾರ್ಯನಿರ್ವಹಿಸಿ ನೌಕರರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಮಹತ್ವದ ಪಾತ್ರವಹಿಸಿದರು. ಅಷ್ಟೇ ಅಲ್ಲದೆ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಶಿಕ್ಷಕರ ಹಕ್ಕುಗಳ ಹೋರಾಟಕ್ಕೆ ಧ್ವನಿಯಾಗಿ ಶಿಕ್ಷಕರ ಹೋರಾಟಕ್ಕೆ ಹೊಸ ಚೇತನ ನೀಡಿದರು.

**✦ ಶಿಕ್ಷಕರ ವರ್ಗಾವಣೆ ಸಮಸ್ಯೆಗೆ ಶಾಶ್ವತ ಪರಿಹಾರದ ಹೋರಾಟ:** ಶಂಭಣ್ಣ ಅವರ ನಾಯಕತ್ವದ ಅವಧಿಯಲ್ಲಿ ಶಿಕ್ಷಕರ ಸಮಸ್ಯೆಗಳ ಪೈಕಿ ಅತ್ಯಂತ ಜಟಿಲ ವಿಷಯವೆಂದರೆ ವರ್ಗಾವಣೆ ಸಮಸ್ಯೆ, ರಾಜ್ಯದ ಅನೇಕ ಶಿಕ್ಷಕರು 17 ರಿಂದ 18 ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕುಟುಂಬ ಒಂದು ಜಿಲ್ಲೆಯಲ್ಲಿ, ಶಿಕ್ಷಕರು ಮತ್ತೊಂದು ಜಿಲ್ಲೆಯಲ್ಲಿ ಕೆಲಸ ಮಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದ-ರಿಂದ ಕುಟುಂಬದ ನೆಮ್ಮದಿ ಹಾಳಾಗುವುದು, ಮಕ್ಕಳ ಶಿಕ್ಷಣಕ್ಕೆ ತೊಂದರೆ, ಮಾನಸಿಕ ಒತ್ತಡ ಸೇರಿದಂತೆ ಹಲವು ಸಮಸ್ಯೆಗಳು ಉಂಟಾಗಿದ್ದವು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಶಂಭಣ್ಣ ಅವರು ರಾಜ್ಯ ಶಿಕ್ಷಣ ಸಚಿವರು ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ನಡುವೆ ಜೋಡಣಾ ಕೊಂಡಿಯಾಗಿ, ಸಮಾಲೋಚನೆ ನಡೆಸಿ ಶಿಕ್ಷಕರ ಸಮಸ್ಯೆ ಸರ್ಕಾರದ ಗಮನಕ್ಕೆ ತಂದವರು. ಶಿಕ್ಷಕರ ಸಮಸ್ಯೆಗಳನ್ನು ಸಮರ್ಥವಾಗಿ ಮಂಡಿಸಿ, ವರ್ಗಾವಣೆ ಪ್ರಕ್ರಿಯೆಯನ್ನು ಸುಸೂತ್ರವಾಗಿ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದವರಲ್ಲಿ ಶ್ರೀ ಶಂಭುಲಿಂಗನಗೌಡ್ರು ಅವರು. ಇದರಿಂದ ಸಾವಿರಾರು ಶಿಕ್ಷಕರು ತಮ್ಮ ಕುಟುಂಬದ ಸಮೀಪದಲ್ಲಿ ಕಾರ್ಯನಿರ್ವಹಿಸುವ ಅವಕಾಶ ಪಡೆದರು. ಈ ಸಾಧನೆಯನ್ನು ರಾಜ್ಯದ ಶಿಕ್ಷಕರು ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

**✦ ಗಟ್ಟಿ ಧ್ವನಿಯಲ್ಲಿ ಹಕ್ಕುಗಳಿಗಾಗಿ ಹೋರಾಟ:** ಶಂಭಣ್ಣ ಅವರ ಹೋರಾಟ ಯಾವುದೇ ವ್ಯಕ್ತಿ ಅಥವಾ ಗುಂಪಿನ ವಿರುದ್ಧವಾಗಿರಲಿಲ್ಲ. ಅದು ಸದಾ ಶಿಕ್ಷಕರು ಮತ್ತು ನೌಕರರ ನ್ಯಾಯಸಮ್ಮತ ಹಕ್ಕುಗಳಿಗಾಗಿ ನಡೆದ ಹೋರಾಟವಾಗಿ-ತ್ತು. ವಿಧಾನ ಸೌಧದಲ್ಲಿ ಗಟ್ಟಿ ಧ್ವನಿಯಾಗಿ ರಾಜ್ಯದ ಉದ್ದಗಲಕ್ಕೂ ನಿರಂತರ ಸುತ್ತಾಟ ನಡೆಸಿ ಪ್ರಾದೇಶಿಕವಾರು ಶಿಕ್ಷಕರ ಸಮಸ್ಯೆ ಆಲಿಸಿ ಸರ್ಕಾರದ ಗಮನಕ್ಕೆ ತಂದಿದ್ದವರು. ಶಿಕ್ಷಕರ ಬಡ್ತಿ ಸಮಸ್ಯೆ, ವೇತನ ಮತ್ತು ಭತ್ಯೆಗಳ ಪರಿಷ್ಕರಣೆ, ವರ್ಗಾವಣೆ ನೀತಿಯಲ್ಲಿ ಪಾರದರ್ಶಕತೆ, ನಿವೃತ್ತಿ ಸೌಲಭ್ಯಗಳ ರಕ್ಷಣೆ, ಗ್ರಾಮೀಣ ಪ್ರದೇಶದ ಶಿಕ್ಷಕರ ಸಮಸ್ಯೆಗಳು, ನೌಕರರ ಸೇವಾ ಭದ್ರತೆ, ಸಂಘಟನಾ ಬಲವರ್ಧನೆ, ರಾಜ್ಯಮಟ್ಟದ ಅನೇಕ ಪ್ರತಿಭಟನೆಗಳು, ಮನವಿ ಕಾರ್ಯಕ್ರಮಗಳು ಮತ್ತು ಮಾತುಕತೆಗಳಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು. ಅವರ ಧ್ವನಿ ಸದಾ ಶಿಕ್ಷಕರು ಮತ್ತು ನೌಕರರ ಪರವಾಗಿಯೇ ಮೊಳಗುತ್ತಿತ್ತು.

**✦ ಶಿಕ್ಷಕರು ಮತ್ತು ನೌಕರರ ‘ಅಣ್ಣ’:**

## ನಿವೃತ್ತಿ ಸೇವೆಯ ಅಂತ್ಯವಲ್ಲ

**ಸರ್ಕಾರಿ ಸೇವೆಯಿಂದ ನಿವೃತ್ತಿಯಾಗಿರುವ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರಿಗೆ ಇದು ಅಧಿಕೃತ ಕರ್ತವ್ಯದ ಅಂತ್ಯ. ಆದರೆ ಅವರು ಕಟ್ಟಿದ ವಿಶ್ವಾಸ, ಸಂಘಟನಾ ಪರಂಪರೆ, ಹೋರಾಟದ ಇತಿಹಾಸ ಮತ್ತು ಮಾನವೀಯ ಮೌಲ್ಯಗಳು ಎಂದಿಗೂ ಅಂತ್ಯಗೊಳ್ಳುವುದಿಲ್ಲ. ಅವರ ಅನುಭವ, ಮಾರ್ಗದರ್ಶನ ಮತ್ತು ಚಿಂತನೆಗಳು ಮುಂದಿನ ಪೀಳಿಗೆಯ ಶಿಕ್ಷಕರು ಹಾಗೂ ನೌಕರರಿಗೆ ದಾರಿದೀಪವಾಗಲಿವೆ.**

## ಗೌಡರ ಆದರ್ಶದ ಬದುಕಿನ ತತ್ವ

**‘ನಾಯಕತ್ವ ಎಂದರೆ ಸೇವೆ’ ‘ಹೋರಾಟ ಎಂದರೆ ನ್ಯಾಯಕ್ಕಾಗಿ ಧ್ವನಿ’ ‘ಸಂಘಟನೆ ಎಂದರೆ ಒಗ್ಗಟ್ಟು’ ‘ಅಧಿಕಾರ ಎಂದರೆ ಜವಾಬ್ದಾರಿ’ ‘ಮಾನವೀಯತೆ ಎಂದರೆ ನಿಜವಾದ ನಾಯಕತ್ವ’ ತಮ್ಮ ಬದುಕಿನ ಮೂಲಕ ಅವರು ಈ ಮೌಲ್ಯಗಳನ್ನು ಸಾಕಾರಗೊಳಿಸಿದ್ದಾರೆ.**

ಸಂಘಟನಾ ನಾಯಕತ್ವಕ್ಕಿಂತಲೂ ಹೆಚ್ಚು ಶಂಭಣ್ಣ ಅವರನ್ನು ವಿಶೇಷ ’ಗೊಳಿಸಿದ್ದು ಅವರ ಮಾನವೀಯತೆ. ಯಾವುದೇ ಶಿಕ್ಷಕ ಅಥವಾ ನೌಕರ ಸಮಸ್ಯೆ ಎದುರಿಸಿದಾಗ ಮೊದಲು ನೆನಪಾಗುತ್ತಿದ್ದ ಹೆಸರು ಶಂಭಣ್ಣ. ಅವರು ಕೇವಲ ಸಲಹೆ ನೀಡುವುದಲ್ಲ; ಸಮಸ್ಯೆಗೆ ಪರಿಹಾರ ಸಿಗುವವರೆಗೂ ಜೊತೆಯಾಗಿರುತ್ತಿದ್ದರು. ಅದರಲ್ಲೇ ಅನೇಕ ಶಿಕ್ಷಕರು ಇಂದಿಗೂ ಹೇಳುವ ಮಾತೆಂದರೆ “ನಮಗೆ ಸಂಕಷ್ಟ ಬಂದಾಗ ಮೊದಲು ನೆನಪಾಗುವವರು ಶಂಭಣ್ಣ.” ಈ ಮಾತು ಅವರ ಬಗ್ಗೆ ಜನರ ಮನಸ್ಸಿನಲ್ಲಿರುವ ಪ್ರೀತಿ ಮತ್ತು ವಿಶ್ವಾಸಕ್ಕೆ ಸಾಕ್ಷಿಯಾಗಿದೆ. ಸರಳತೆ ಅವರ ಅತಿದೊಡ್ಡ ಶಕ್ತಿ, ಇಂದಿನ ದಿನಗಳಲ್ಲಿ ಅನೇಕರು ನಾಯಕತ್ವವನ್ನು ಅಧಿಕಾರ ಮತ್ತು ಪ್ರಚಾರದ ಮೂಲಕ ಅಳೆಯುವ ಸಂದರ್ಭದಲ್ಲಿ, ಶಂಭಣ್ಣ ಅವರು ಸರಳತೆಯ ಮೂಲಕ ಜನಮನ ಗೆದ್ದಿದ್ದಾರೆ. ಬಿಳಿ ಉಡುಪು, ನೇರ ಮಾತು, ಎಲ್ಲರೊಂದಿಗೆ ಆತ್ಮೀಯ ವರ್ತನೆ ಮತ್ತು ಅಹಂಕಾರವಿಲ್ಲದ ವ್ಯಕ್ತಿತ್ವ ಅವರ ಗುರುತುಗಳಾಗಿವೆ. **ಅವರನ್ನು ಭೇಟಿ ಮಾಡಿದ ಪ್ರತಿಯೊಬ್ಬರೂ “ಇವರು ನಮ್ಮವರೇ” ಎಂಬ ಭಾವನೆಯೊಂದಿಗೆ ಹಿಂದಿರುಗುತ್ತಾರೆ. ಇದೇ ಅವರ ಜನಪ್ರಿಯತೆಯ ಮೂಲ ಕಾರಣವಾಗಿದೆ.**

**✦ ಮಾನವೀಯತೆಯ ಮೌಲ್ಯಗಳನ್ನು ಉಳಿಸಿದ ನಾಯಕ:** ಶಂಭಣ್ಣ ಅವರು ನೌಕರರ ಸಮಸ್ಯೆಗಳನ್ನು ಕೇವಲ ಕಡತಗಳ ವಿಚಾರವಾಗಿ ನೋಡಲಿಲ್ಲ. ಪ್ರತಿಯೊಂದು ಸಮಸ್ಯೆಯ ಹಿಂದೆ ಒಂದು ಕುಟುಂಬ, ಒಂದು ಜೀವನ ಮತ್ತು ಒಂದು ಕನಸು ಅಡಗಿದೆ ಎಂಬ ಅರಿವು ಅವರಲ್ಲಿತ್ತು. ಆದ್ದರಿಂದಲೇ ಅವರು ಸದಾ ಹೇಳುತ್ತಿದ್ದ ತತ್ವ: “ನೌಕರರ ಗೌರವ ಕಾಪಾಡಿದಾಗಲೇ ಆಡಳಿತ ಬಲವಾಗುತ್ತದೆ.” ಈ ಚಿಂತನೆಯೇ ಅವರನ್ನು ಇತರ ನಾಯಕರಿಗಿಂತ ಭಿನ್ನಗೊಳಿಸಿದೆ. ಯುವ ಪೀಳಿಗೆಗೆ ಆದರ್ಶ, ಇಂದಿನ ಯುವ ಶಿಕ್ಷಕರು ಮತ್ತು ನೌಕರರಿಗೆ ಶಂಭಣ್ಣ ಅವರ ಜೀವನ ದೊಡ್ಡ ಪಾಠವಾಗಿದೆ.

–ಪ್ರಕಾಶ ಗೌಡ ಎಸ್.ಯು.
ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ
ಮೊ.9980910533

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka